ಬೆಂಗಳೂರು, ಕೋಲಾರ, ಹಾಸನ, ಚಿತ್ರದುರ್ಗ, ದಾವಣಗೆರೆ, ವಿಜಯನಗರ, ಬಳ್ಳಾರಿ, ರಾಯಚೂರು, ವಿಜಯಪುರ, ಕಲಬುರಗಿ,

ದಶಕದ ನಡಿಗೆ

RNI No.: KARKAN/2014/54928

ನೊಂದವರ ಧ್ವನಿ

# ಸಹಾಯ ವಾಣಿ

ವೆಬ್‌ಸೈಟ್:– www.sahayavani.com

Postel Registration No.:KA/BGW-1862/2024-26, Patrika channel, RMS Bhavan, Bengaluru, PSO, Mysore Road, Bengaluru-560026

SAHAYAVANI DAILY PAPER

ಕನ್ನಡ ದಿನಪತ್ರಿಕೆ

EDITOR : S.K.WADEYAR

ಸಂಪುಟ : 14, Vol : 14, ಸಂಚಿಕೆ :109, Issue : 109, ದಿನಾಂಕ : 03-06-2026, Date : 03-06-2026, ಬುಧವಾರ, Wednesday, ಪುಟ : 4, Page : 4, Rs. 3–00

ಸಂಪಾದಕರು : ಎಸ್.ಕೆ.ಒಡೆಯರ್, ಉಪ ಸಂಪಾದಕರು : ಸುಚಿತ್ರ ಎಸ್.ಒಡೆಯರ್, ಗೌರವ ಸಂಪಾದಕರು : ಗುರುರಾಜ ಎಂ., ಫೋ: 080 31212322, ಮೊ : 9902543494, Email : sahayavanay@gmail.com

## ಡಿಕೆಶಿ ಪದಗ್ರಹಣಕ್ಕೆ ಭರದ ಸಿದ್ಧತೆ : ಫ್ಲೆಕ್ಸ್, ಬ್ಯಾನರ್‌ಗಳಿಂದ ರಾರಾಜಿಸುತ್ತಿದೆ ಬೆಂಗಳೂರು

ಸಹಾಯವಾಣಿ ಸುದ್ದಿ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವಿಕಾರ ಸಮಾರಂಭಕ್ಕೆ ಬೆಂಗಳೂರಿನಲ್ಲಿ ಭರ್ಜರಿ ಸಿದ್ಧತೆಗಳು ನಡೆದಿವೆ.ಲೋಕಭವನದಲ್ಲಿ ಸಂಜೆ 4.05ಕ್ಕೆ ಮುಖ್ಯಮಂತ್ರಿ ಹಾಗೂ ಸಂಪುಟದ ಸಚಿವರ ಪ್ರಮಾಣವಚನ ಸ್ವಿಕಾರ ಸಮಾರಂಭ ನಡೆಯಲಿದೆ. ಇದಕ್ಕಾಗಿ ನಗರದಾದ್ಯಂತ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ.

ಲೋಕಭವನದ ಗಾಜಿನ ಮನೆಯಲ್ಲಿ ವೇದಿಕೆ ಸಜ್ಜುಗೊಂಡಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕ ಗಾಂಧಿ,

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸುವ ಸಾಧ್ಯತೆ ಇದೆ.

ಎಲ್ಲಾ ಧರ್ಮದ ಧಾರ್ಮಿಕ ಮುಖಂಡರನ್ನು ಪ್ರಮಾಣವಚನ ಸ್ವಿಕಾರ ಸಮಾರಂಭಕ್ಕೆ ಸಾಕ್ಷಿಕ–ರಿಸುವಂತೆ ಆಹ್ವಾನಿಸಲಾಗಿದೆ. ಮಾಜಿ ಸಂಸದ ಡಿ.ಕೆ.ಸುರೇಶ್ ಲೋಕಭವನಕ್ಕೆ ಭೇಟಿ ನೀಡಿ, ಪ್ರಮಾಣವಚನ ಸ್ವಿಕಾರ ಸಮಾರಂಭದ ಪೂರ್ವ



ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.ಗಾಜಿನ ಮನೆಯಲ್ಲಿ ಸುಮಾರು 500 ಜನರಿಗೆ ಮಾತ್ರ ಆಸನ ವ್ಯವಸ್ಥೆ ಮಾಡಲು ಅವಕಾಶವಿದೆ.ಆದರೆ ಈಗಾಗಲೇ ಒಂದು ಸಾವಿರಕ್ಕೂ ಹೆಚ್ಚು ಪಾಸ್‌ಗಳನ್ನು ವಿತ–ರಿಸಲಾಗಿದೆ. ಇದರಿಂದ ಲೋಕಭವನದ ಒಳಗೂ ನೂಕು ನುಗ್ಗಲಿನ ವಾತಾವರಣ ನಿರ್ಮಾಣವಾಗುವ ಸಾಧ್ಯತೆ ಇದೆ.

ಲೋಕಭವನದ ಹೊರಗೆ ರಸ್ತೆ ಸಂಚಾರವನ್ನು ಸ್ಥಗಿತಗೊಳಿಸಿ, ಬ್ಯಾರಿಕೇಡ್ ಹಾಕಲಾಗಿದೆ. ಸಮಾರಂಭದ ವೀಕ್ಷಣೆಗೆ ಅನುಕೂಲವಾಗಲು ದೊಡ್ಡ ದೊಡ್ಡ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುತ್ತಿದೆ. ಹೆಚ್ಚು ಜನ ಕಾರ್ಯಕ್ರಮಕ್ಕೆ ಆಗಮಿಸದಂತೆ ಮನವಿ ಮಾಡಲಾಗುತ್ತಿದೆ.

ಪುಟ–2

## ಡಿಕೆಶಿ ಸಿಎಂ ಆಗುತ್ತಿದ್ದಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನದಲ್ಲೂ ಬದಲಾವಣೆ ವದಂತಿ..?



ಸಹಾಯವಾಣಿ ಸುದ್ದಿ

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವಿಕರಿಸಲು ಕ್ಷಣಗಣನೆ ಆರಂಭವಾಗಿರುವಂತೆ, ಇತ್ತ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನ ಪಲ್ಲಟವಾಗಲಿದೆ ಎಂಬ ವದಂತಿ ಹಬ್ಬಿದೆ.

ಶಾಡೋ ಸಿ.ಎಂ (ಛಾಯಾ ಮುಖ್ಯಮಂತ್ರಿ) ಎಂದೇ ಕರೆಯಲ್ಪಡುವ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನ ರಾಜ–ಕೀಯವಾಗಿ ಅತ್ಯಂತ ಮಹತ್ವದ ಸಂವಿಧಾನಿಕ ಹುದ್ದೆಯಾಗಿದೆ.ಸರ್ಕಾರವನ್ನು ಸದನದ ಹೊರಗೆ ಹಾಗೂ ಒಳಗೆ ಇಕ್ಕಟ್ಟಿಗೆ ಸಿಲುಕಿಸುವುದು, ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಪುಟ–2

# ಸಚಿವರ ಪಟ್ಟಿಗೆ ಹೈ ಮುದ್ರೆ

ಸಹಾಯವಾಣಿ ಸುದ್ದಿ

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಂಜೆ ಪ್ರಮಾಣ ವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ರವರ ಜತೆ 12 ರಿಂದ 14 ಮಂದಿ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದು, ಪ್ರಮಾಣ ವಚನ ಸ್ವೀಕರಿಸಲಿರುವ ಸಚಿವರುಗಳ ಪಟ್ಟಿಯನ್ನು ಕಾಂಗ್ರೆಸ್ ಹೈಕಮಾಂಡ್ ಇಂದು ಅಂತಿಮಗೊಳಿಸಲಿದೆ.

ಮೊದಲ ಹಂತದಲ್ಲಿ ಬಹುತೇಕ ಹಿರಿಯ ಶಾಸಕರುಗಳೇ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದು, 2ನೇ ಹಂತದಲ್ಲಿ 8 ರಿಂದ 10 ಮಂದಿ ಹೊಸ ಮುಖಗಳಿಗೆ ಅವಕಾಶ ನೀಡಲು



ಹೈಕಮಾಂಡ್ ನಿರ್ಧರಿಸಿದೆ.

ಸಚಿವರ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಅವರ ದೆಹಲಿ ನಿವಾಸದಲ್ಲಿಂದು ಪುಟ–2

## ಸಚಿವ ಸ್ಥಾನ ಅಥವಾ ಡಿಸಿಎಂ ಹುದ್ದೆಗೆ ಪೈಪೋಟಿ ಮಾಡುತ್ತಿಲ್ಲ, ಅವಕಾಶ ಸಿಕ್ಕರೆ ಕೆಲಸ ಮಾಡುತ್ತೇನೆ : ಯು.ಟಿ.ಖಾದರ್

ಸಹಾಯವಾಣಿ ಸುದ್ದಿ

ಬೆಂಗಳೂರು: ಸಚಿವ ಸ್ಥಾನ ಅಥ–'ವಾ ಉಪ ಮುಖ್ಯಮಂತ್ರಿ ಹುದ್ದೆಗಾಗಿ ತಾವು ಯಾರ ಜೊತೆಯಲ್ಲೂ ಪೈಪೋಟಿ ಮಾಡುತ್ತಿಲ್ಲ. ಅವಕಾಶ ಸಿಕ್ಕರೆ ಕೆಲಸ ಮಾಡುತ್ತೇನೆ. ಇಲ್ಲವಾದರೆ ಇರುವ ಜವಾಬ್ದಾರಿಯನ್ನೆ ಸಮರ್ಥವಾಗಿ ನಿಭಾಯಿಸುವುದಾಗಿ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವೀಗ ವಿಧಾನಸಭೆಯ ಅಧ್ಯಕ್ಷರಾಗಿದ್ದು, ರಾಜಕೀಯವಾಗಿ ಮಾತನಾಡುವಂತಿಲ್ಲ ಎಂದು ಪದೇಪದೇ ಪುನರುಚ್ಚರಿಸಿದರು.

ತಮಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ಬಗ್ಗೆ ಯಾವುದೇ



ಮಾಹಿತಿ ಇಲ್ಲ. ಕಳೆದ ಬಾರಿ ಸಂಪುಟ ಪುನರ್‌ರಚನೆಯ ವೇಳೆಯಲ್ಲೂ ಇದೇ ರೀತಿ ಚರ್ಚೆಯಾಗಿತ್ತು ಎಂದಿದ್ದಾರೆ.

ಜಮೀರ್ ಅಹಮದ್ ಖಾನ್ ಅವರ ಆಡಿಯೋ ವೈರಲ್ ಆಗಿದ್ದರಿಂದ ತಮ ಹಾದಿ ಸುಗಮವಾಗಿದೆ ಎಂಬುದು ಸರಿಯಲ್ಲ. ನಾವ್ಯಾರೂ ಅಧಿಕಾರಕ್ಕಾಗಿ ಪೈಪೋಟಿ ಮಾಡುತ್ತಿಲ್ಲ. ನಾವೆಲ್ಲರೂ ಪರಸ್ಪರ ಸೌಹಾರ್ದತೆಯಿಂದ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ದೆಹಲಿಯಲ್ಲಿ ಲೋಕಸಭಾಧ್ಯಕ್ಷರ ಕಚೇ–ರಿಯಲ್ಲಿ ಕಾರ್ಯಕ್ರಮ ಇತ್ತು. ಅದರಲ್ಲಿ ಭಾಗವಹಿಸಲು ತಾವು ಭೇಟಿ ನೀಡಿದ್ದಾಗಿ ಸ್ಪಷ್ಟಪಡಿಸಿದರು. ಈ ವೇಳೆ ತಾವು ಎಐಸಿಸಿ ಕಚೇರಿಗೆ ಭೇಟಿ ನೀಡಿಲ್ಲ, ಆ ರೀತಿ ಹೋಗಲು ಅವಕಾಶವೂ ಇಲ್ಲ ಎಂದು ಹೇಳಿದ್ದಾರೆ.

ಸಚಿವ ಸ್ಥಾನ ಸಿಕ್ಕರೆ ಪ್ರಮಾಣವಚನ ಸ್ವಿಕರಿಸುತ್ತೇನೆ. ಇಲ್ಲವಾದರೆ ವಿಧಾನಸಭಾಧ್ಯಕ್ಷರಾಗಿ ಮೇಲೆ ಕುಳಿತು ಹೊಸ ಮುಖ್ಯಮಂತ್ರಿಯವರಿಗೆ ಮತ್ತು ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯಾವುದೂ ಇಲ್ಲ ಎಂದಾದರೆ ಶಾಸಕನಾಗಿ ವಿಧಾನಸಭೆಯ ಸಭಾಂಗಣದಲ್ಲಿರ್ತುತೇನೆ. ಜನ ಬೇಡವೆಂದರೆ ಮಜಿಯಾಗಿ ಯಾವ ಕೆಲಸ ಮಾಡಬಹುದೋ ಪುಟ–2

## ಡಿಕೆಶಿ ಸಿಎಂ ಆಗುತ್ತಿದ್ದಂತೆ ಬಿಜೆಪಿಯಲ್ಲಿ ಬದಲಾದ ಲೆಕ್ಕಾಚಾರಗಳು

ಸಹಾಯವಾಣಿ ಸುದ್ದಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಿ ಅಧಿಕಾರ ಸ್ವಿರಿಸಲು ದಿನಗಣನೆ ಆರಂಭವಾಗಿರುವಂತೆ ಪ್ರತಿಪಕ್ಷ ಬಿಜೆಪಿಯಲ್ಲಿ ರಾಜಕೀಯ ಲೆಕ್ಕಾಚಾರಗಳು ಬದಲಾಗಿವೆ.

ಮುಂಬರುವ 2028ರ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಬಿಜೆಪಿ ಮತ್ತು ಸಂಘ ಪರಿವಾರ ತನ್ನ ರಾಜಕೀಯ ರಣತಂತ್ರವನ್ನು ಬದಲಾಯಿಸಲು ಮುಂದಾಗಿದೆ. ಡಿಕೆ ಶಿವಕುಮಾರ್ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗುತ್ತಿರುವುದರಿಂದ ಬರುವ ಚುನಾವಣೆಗಳು ತೀರ ಕ್ಲಿಷ್ಟಕರ ಆಗುತ್ತಿರುವ ಹಿನ್ನೆಲೆಯಲ್ಲಿ ಆರ್ ಎಸ್ ಎಸ್ ಮತ್ತು ಬಿಜೆಪಿ ಮುಂದಿನ ಕಾರ್ಯತಂತ್ರವನ್ನು ಗಣನೀಯ ಪ್ರಮಾಣದಲ್ಲಿ ಬದಲಾಯಿಸಲು ತೀರ್ಮಾನಿಸಿದೆ.

ರಾಜ್ಯದಲ್ಲಿ ನಾಯಕತ್ವ



ಬದಲಾಗದೆ ಮುಂದಿನ ವಿಧಾನಸಭೆ ಚುನಾವಣೆವರೆಗೂ ಸಿದ್ದರಾಮಯ್ಯ ಅವರೇ ಅಧಿಕಾರದಲ್ಲಿ ಮುಂದುವರೆಯುತ್ತಾರೆಂಬ ಲೆಕ್ಕಾಚಾರ ಬಿಜೆಪಿಯಲ್ಲಿ ಇತ್ತು.

ಆದರೆ ಎಲ್ಲಾ ನಿರೀಕ್ಷೆಗಳನ್ನು ಮೀರಿ ಸಿದ್ದರಾಮಯ್ಯ ಅವರು ತಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಹಾಗೂ ತೆರವಾಗಿರುವ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ಬರುತ್ತಿರುವುದು ಇಡೀ ಬಿಜೆಪಿಯ ರಾಜಕೀಯ ಲೆಕ್ಕಾಚಾರಗಳನ್ನು ತಲೆಕೆಳಗಾಗುವಂತೆ ಮಾಡಿದೆ.

ಹೀಗಾಗಿ ಬಿಜೆಪಿ ಹಾಗೂ ಸಂಘ ಪರಿವಾರದ ನಾಯಕರು ತನ್ನ ಮುಂದಿನ ರಾಜಕೀಯ ರಣತಂತ್ರವಾಗಿ ತಮದೇ ಆದ ಕಾರ್ಯ ಸೂಚಿಯನ್ನು ರೂಪಿಸಲು ಮುಂದಾಗಿದ್ದಾರೆಂದು ತಿಳಿದು ಬಂದಿದೆ. ಸದ್ಯ ರಾಜ್ಯದಲ್ಲಿ ಬಿಜೆಪಿ ವಿರೋಧ ಪಕ್ಷದಲ್ಲಿ ತನ್ನ ಸ್ಥಾನವನ್ನು ಪುಟ–2

## ನನ್ನ ರಾಜಕೀಯ ಜೀವನದಲ್ಲಿ ಗಾಂಧಿ ಕುಟುಂಬ ನಿರ್ಣಾಯಕ ಪಾತ್ರ ವಹಿಸಿದೆ : ಡಿಕೆಶಿ

ಸಹಾಯವಾಣಿ ಸುದ್ದಿ

ಬೆಂಗಳೂರು:ಗಾಂಧಿ ಕುಟುಂಬವು ತಮ ರಾಜಕೀಯ ಜೀವನ ಪಯಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎಂದು ನಿಯೋಜಿತ ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವಿಕರಿಸುವ ಮುನ್ನಾದಿನ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಗಾಂಧಿ ಕುಟುಂಬದ ರಾಜೀವ್‌ಗಾಂಧಿಯಿಂದ ಆರಂಭಿಸಿ, ಪ್ರಿಯಾಂಕ ಗಾಂಧಿಯವ–ರಿಗೂ ಪ್ರತಿಯೊಬ್ಬರ ಗುಣಲಕ್ಷಣಗಳು ಹಾಗೂ ತಮ ವೈಯಕ್ತಿಕ ಜೀವನದಲ್ಲಿ ಅವರು ಬೀರಿದ ಪ್ರಭಾವಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ್ದಾರೆ.

ಗಾಂಧಿ ಕುಟುಂಬ ತಮ ನಾಯಕತ್ವದ ವಿಚಾರವಾಗಿ ಅಷ್ಟೆ ಅಲ್ಲ, ಜೀವನದ ವಿವಿಧ ಹಂತಗಳಲ್ಲಿ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಅಗಾಧವಾದದ್ದು



ಎಂದಿದ್ದಾರೆ.ತಾವು ಪದೇ ಪದೇ ರಾಜೀವ್ ಗಾಂಧಿಯವರನ್ನು ನೆನಪಿಸಿಕೊಳ್ಳುತ್ತಿದ್ದು, ನನ್ನಲ್ಲಿದ್ದ ಸಾಮರ್ಥ್ಯವನ್ನು ಗುರುತಿಸುವ ಮೂಲಕ, ಒಬ್ಬ ಯುವ ಕಾರ್ಯಕರ್ತನಲ್ಲಿದ್ದ ಸಾಧ್ಯತೆಗಳನ್ನು ಅವರು ಪ್ರಕಟ ಪಡಿಸಿದ್ದರು. ಅವರ ಪ್ರೊತ್ಸಾಹ ನನಗೆ ದೊಡ್ಡ ಕನಸು ಕಾಣುವ ಆತವಿಶ್ವಾಸವನ್ನು ನೀಡಿತು ಹಾಗೂ ಸಾರ್ವಜನಿಕ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸ್ಪೂರ್ತಿ ನೀಡಿತ್ತು ಎಂದಿದ್ದಾರೆ. ಇತರರಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ, ಅವರ ನಿರೀಕ್ಷೆಗಳನ್ನೂ ಮೀರಿ ಬೆಳೆಯಲು ಪುಟ–2

## ಜಮೀರ್ ಅಹಮದ್ – ಡಿ.ಕೆ.ಸುರೇಶ್ ಮಹತ್ವದ ಮಾತುಕತೆ

ಸಹಾಯವಾಣಿ ಸುದ್ದಿ

ಬೆಂಗಳೂರು: ಮಹತ್ವದ ಬೆಳವಣಿಗೆಯಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮನೆಗೆ ತೆರಳಿ ಮಹತ್ವದ ಮಾತುಕತೆ ನಡೆಸಿದ್ದಾರೆ.

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ನಾಳೆ ಪ್ರಮಾಣವಚನ ಸ್ವಿಕರಿಸುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾಜಿ ಸಚಿವರು ಹಾಗೂ ಗಣ್ಯರನ್ನು ಡಿ.ಕೆ.ಸುರೇಶ್ ಆಹ್ವಾನಿಸುತ್ತಿದ್ದಾರೆ. ಅದರ ಭಾಗವಾಗಿ ಜಮೀರ್ ಅವರ ಮನೆಗೂ ಭೇಟಿ ಮಾಡಿ ಆಹ್ವಾನ ನೀಡಲಾಗಿದೆ ಎಂದು ಹೇಳಲಾಗಿದೆ.

ದಾವಣಗೆರೆ ದಕ್ಷಿಣ ವಿಧಾನಸಭೆಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧವಾಗಿ ಮತ ಹಾಕಿಸುವಂತೆ ಜಮೀರ್ ಅಹಮದ್ ಖಾನ್ ಕಾಂಗ್ರೆಸ್‌ನ ಉಚ್ಚಾಟಿ–



ತ ನಾಯಕನ ಜೊತೆ ಸಂಭಾಷಣೆ ನಡೆಸಿದ್ದಾರೆ ಎನ್ನಲಾದ ಆಡಿಯೋ ನಿನ್ನೆ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿತ್ತು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುಟ–2

# 70.70 ಲಕ್ಷ ರೂ.ಸೈಬರ್ ವಂಚನೆ

ಸಹಾಯವಾಣಿ ಸುದ್ದಿ

ಕಲಬುರಗಿ: ನಗರದ ಎಂಎಕೆ ಮಿನ ಜಾವೀದ್ ಮನಿಯಾರ್ ಮತ್ತು ಫರಹತಾಬಾನ ಸಮೀರ್ ಮಿಯಾ ಅವರು ಸೈಬರ್ ವಂಚಕರೊಂದಿಗೆ ಸೇರಿಕೊಂಡು ತಮ್ಮ ಬ್ಯಾಂಕ್ ಖಾತೆಗಳನ್ನು ಸಬರ್ ಅಪರಾಧಕ್ಕೆ ಬಳಕೆ ಮಾಡಿಕೊಂಡು ಮ್ಯೂಲ್ ಬ್ಯಾಂಕ್ ಖಾತೆಗಳಿಗೆ ಆಲೈನ್ ಮುಖಾಂತರ 70.70 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡು ಸಾರ್ವಜನಿಕರಿಗೆ ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ.

ಸೈಬರ್ ಕಮಾಂಡ್ ಘಟಕದ ಡಿಜಿಪಿ ಅವರ ಸೂಚನೆ ಮೇರೆಗೆ ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆ ಸಿಪಿಸಿ ಅಂಬ್ರೇಶ್ ಅವರು ಕಲಬುರಗಿ ನಗರ ವ್ಯಾಪ್ತಿಗೆ ಒಳಪಡುವ ಮ್ಯೂಲ್ ಖಾತೆಗಳನ್ನು ಪರಿಶೀಲಿಸಿದಾಗ ಈ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.

ಜಾವೀದ್ ಮನಿಯಾರ್ ಮತ್ತು ಸಮೀರ್ ಮಿಯಾ ಅವರು ಸೈಬರ್ ವಂಚಕರೊಂದಿಗೆ ಕೂಡಿಕೊಂಡು ತಮ್ಮ ಖಾತೆಗಳನ್ನು ಸಬರ್ ಅಪರಾಧಕ್ಕೆ ಬಳಕೆ ಮಾಡಿಕೊಂಡು ಆ

ಲೈನ್ ಮುಖಾಂತರ 70.70 ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡು ವಂಚನೆ ಮಾಡಿರುವ ಬಗ್ಗೆ ಇಬರಿಬ್ಬರ ವಿರುದ್ಧ ಹರಿಯಾಣ ರಾಜ್ಯದ ಗುರುಗ್ರಾಮ್ ಜಿಲ್ಲೆಯ ಮನೆಸಾರ್ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಇಬ್ಬರು ಸೈಬರ್ ವಂಚಕರ ವಿರುದ್ಧ ಇದೀಗ ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ಒಂದನೇ ಪುಟದಿಂದ

# ಡಿಕೆಶಿ ಪದಗ್ರಹಣಕ್ಕೆ ಭರದ ಸಿದ್ಧತೆ

ಕಾರ್ಯಕ್ರಮಕ್ಕೆ ಆಗಮಿಸದಂತೆ ಮನವಿ ಮಾಡಲಾಗುತ್ತಿದೆ. ಆರಂಭದಲ್ಲಿ ಸುಮಾರು 20 ಸಾವಿರ ಜನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಹೈಕಮಾಂಡ್ ಸೂಚನೆ ಹಿನ್ನೆಲೆಯಲ್ಲಿ ಸರಳ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಿದ್ದರಾಮಯ್ಯಅವರರಾಜೀನಾಮೆಬಳಿಕಡಿ.ಕೆ.ಶಿವಕುಮಾರ್ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು, ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ. ಈ ಮೂಲಕ ದೇಶದ ಶ್ರೀಮಂತ ಮುಖ್ಯಮಂತ್ರಿ ಎಂಬ ಕೀರ್ತಿಗೆ ಬಾಜನರಾಗಲಿದ್ದಾರೆ.ಈವರೆಗೂ ಸಂಪುಟಕ್ಕೆ ಎಷ್ಟು ಜನ ಸಚಿವರ ಸೇರ್ಪಡೆಯಾಗಲಿದ್ದಾರೆ ಎಂಬುದು ಖಚಿತವಾಗಿಲ್ಲ, ಕಾಂಗ್ರೆಸ್ ಹೈಕಮಾಂಡ್ ಕೊನೆಯ ಕ್ಷಣದವರೆಗೂ ಗುಟ್ಟು ಬಿಟ್ಟುಕೊಟ್ಟಿಲ್ಲ. ಆದರೆ ಕಾಂಗ್ರೆಸ್‌ನ ಎಲ್ಲಾ ಶಾಸಕರಿಗೂ ಬೆಂಗಳೂರಿನ ಕೇಂದ್ರ ಸ್ಥಾನದಲ್ಲೆ ಇರುವಂತೆ ಸೂಚನೆ ನೀಡಲಾಗಿದೆ.

ಯಾರಿಗೆ ಅದೃಷ್ಟ ಒಲಿಯಲಿದೆ, ಯಾರು ಅವಕಾಶ ವಂಚಿತರಾಗಲಿದ್ದಾರೆ ಎಂಬುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್‌ನಲ್ಲಿ 8 ವರ್ಷ 14 ದಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಆಳ್ವಿಕೆ ಕೊನೆಗೊಳ್ಳುತ್ತಿದ್ದು, ಡಿ.ಕೆ.ಶಿವಕುಮಾರ್ ಅವರ ಪರ್ವ ಆರಂಭವಾಗಲಿದೆ.ಬಹಳ ವರ್ಷಗಳ ನಂತರ ಮೂಲ ಕಾಂಗ್ರೆಸ್ಸಿಗ ಹಾಗೂ ನಿಷ್ಠಾವಂತ ಕಾರ್ಯಕರ್ತರೊಬ್ಬರಿಗೆ ಅಧಿಕಾರ ಸಿಗುತ್ತಿರುವುದರಿಂದ ಸಂಭ್ರಮ ಮನೆ ಮಾಡಿದೆ. ನಗರ ಪೂರ್ತಿ ಮಧುವಣ-ಗಿತ್ತಿಯಂತೆ ಶೃಂಗಾರಗೊಂಡಿದೆ.

ಫ್ಲೆಕ್ಸ್, ಬ್ಯಾನರ್‌ಗಳ ಮೂಲಕ ಬೆಂಗಳೂರಿನ ಅಂದ ಕೆಡಿಸಬೇಡಿ ಎಂದು ಡಿ.ಕೆ.ಶಿವಕುಮಾರ್ ಹಲವು ಬಾರಿ ಮಾಡಿರುವ ಮನವಿಗೂ ಕಾಂಗ್ರೆಸ್ ಕಾರ್ಯಕರ್ತರು ಕ್ಯಾರೆ ಎಂದಿಲ್ಲ.

ಬೆಂಗಳೂರಿನ ಎಲ್ಲಾ ಮುಖ್ಯರಸ್ತೆಗಳು ಹಾಗೂ ವೃತ್ತಗಳಲ್ಲಿ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ. ಸಣ್ಣಪುಟ್ಟ ನಾಯಕ-ರಿಂದ ಹಿಡಿದು ದೊಡ್ಡ ದೊಡ್ಡ ನಾಯಕರವರೆಗೂ ಫೋಟೊ ಸಹಿತ ಬ್ಯಾನರ್‌ಗಳ ಮೂಲಕ ಶುಭಾಶಯ ತಿಳಿಸುತ್ತಿದ್ದಾರೆ.

2023ರಲ್ಲೆ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಸ್ಥಾನ ಸಿಗಲಿದೆ ಎಂದು ಅಭಿಮಾನಿಗಳು ಭಾರೀ ನಿರೀಕ್ಷೆ ಹೊಂದಿದ್ದರು. ಆದರೆ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯಅವರಿಗೆ ಮೊದಲ ಅವಧಿಗೆ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿತ್ತು. ಸುಮಾರು ಆರು ತಿಂಗಳ ನಿರಂತರ ಸಂಘರ್ಷದ ಮೂಲಕ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಅವಕಾಶ ಪಡೆದಿದ್ದಾರೆ.ಹೀಗಾಗಿ ಬೆಂಗಳೂರು ದಕ್ಷಿಣ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಪ್ರಮುಖವಾದ ನಾಯಕರು ಹಾಗೂ ಕಾರ್ಯಕರ್ತರ ದಂಡು ಹರಿದು ಬರುತ್ತಿದೆ.ಪೊಲೀಸರು ಯಾವುದೇ ಅಹಿತಕರ ಘಟನೆಗಳಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದೋಬಸ್ತ್

# ನಾಯಕನ ಸ್ಥಾನದಲ್ಲೂ ಬದಲಾವಣೆ ವದಂತಿ..?

ಸೇರಿದಂತೆ ಹಲವು ನಿರ್ಧಾರಗಳಲ್ಲಿ ಪ್ರತಿಪಕ್ಷದ ನಾಯಕನ ಸ್ಥಾನ ಪ್ರಮುಖ ಪಾತ್ರ ವಹಿಸುತ್ತದೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿರುವ ಹಿನ್ನೆಲೆಯಲ್ಲಿ ತನ್ನ ಕಾರ್ಯತಂತ್ರವನ್ನು ಬದಲಾಯಿಸಿರುವ ಬಿಜೆಪಿ ಅಕ್ರಮಣ ಶೈಲಿಯ ಹಾಗೂ ಸದನದಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಕೊಂಚ ಯಶಸ್ವಿಯಾಗಿರುವ ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕ ಸುನಿಲ್ ಕುಮಾರ್ ಅವರಿಗೆ ಈ ಸ್ಥಾನವನ್ನು ನೀಡಲು ಗಂಭೀರ ಚಿಂತನೆ ನಡೆಸಿದೆ ಎಂದು ಗೊತ್ತಾಗಿದೆ.

ಸರ್ಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ನಡೆಸುವಲ್ಲಿ ಮತ್ತು ಆಡಳಿತ ಪಕ್ಷವನ್ನು ತೀವ್ರವಾಗಿ ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಬಿಜೆಪಿ ನಾಯಕತ್ವ ವಿಫಲವಾಗಿದೆ ಎಂಬ ಅಭಿಪ್ರಾಯವು ಪಕ್ಷದ ಆಂತರಿಕ ವಲಯದಲ್ಲಿ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಪಕ್ಷದ ನಾಯಕನ ಬದಲಾವಣೆಯ ಚರ್ಚೆ ಮುನ್ನೆಲೆಗೆ ಬಂದಿದೆ.

ಸದ್ಯಕ್ಕೆ ರಾಜ್ಯ ಬಿಜೆಪಿ ನಾಯಕತ್ವ ಅಥವಾ ಹೈಕಮಾಂಡ್‌ನಿಂದ ಆರ್.ಅಶೋಕ್ ಅವರ ಬದಲಾವಣೆ ಕುರಿತು ಯಾವುದೇ ಅಧಿಕೃತ ಷಣೆಯಾಗಿಲ್ಲ. ರಾಜಕೀಯ ಪಕ್ಷಗಳಲ್ಲಿ ಇಂತಹ ಬದಲಾವಣೆಯ ಚರ್ಚೆಗಳು ಸಾಮಾನ್ಯವಾಗಿದ್ದರೂ, ಪ್ರತಿಪಕ್ಷದ ನಾಯಕನ ನೇಮಕವು ಪಕ್ಷದ ಹೈಕಮಾಂಡ್ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತದೆ. ಪ್ರಸ್ತುತ ಬಿಜೆಪಿ ನಾಯಕತ್ವವು ರಾಜಕೀಯ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ತಂತ್ರಗಳನ್ನು ರೂಪಿಸುತ್ತಿದೆ.

ವಿರೋಧ ಪಕ್ಷದ ನಾಯಕನಾದವರು ಸರ್ಕಾರವನ್ನು ಸದನದ ಒಳಗೆ ಮತ್ತು ಹೊರಗೆ ಕಠಿಣ ಪ್ರಶ್ನೆಗಳ ಮೂಲಕ ಇಕ್ಕಟ್ಟಿಗೆ ಸಿಲುಕಿಸುವುದು ಪ್ರಜಾಪ್ರಭುತ್ವದ ಆಶಯವಾಗಿದೆ.

ಆದರೆ, ಆರ್.ಅಶೋಕ್ ಅವರ ವಿರುದ್ಧ ಕೇಳಿಬರುತ್ತಿರುವ ಆರೋಪವೆಂದರೆ, ಮೃದು ಧೋರಣೆ. ಸರ್ಕಾರವನ್ನು ಉರುಳಿಸುವ ಅಥವಾ ಭ್ರಷ್ಟಾಚಾರದ ವಿಷಯಗಳಲ್ಲಿ ದೊಡ್ಡ ಮಟ್ಟದ ಆಂದೋಲನಗಳನ್ನು ರೂಪಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂಬುದು ಅವರ ಪಕ್ಷದ ಒಳಗಿನವರೇ ಕೆಲವೊಮ್ಮೆ ವ್ಯಕ್ತಪಡಿಸುವ ಅಸಮಾಧಾನ.

ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ನಡುವೆ ಹಾಗೂ ಪಕ್ಷದ ಹಿರಿಯ ನಾಯಕರ ನಡುವೆ ಸಂಪೂರ್ಣ ಸಮನ್ವಯದ ಕೊರತೆಯಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದು ಸರ್ಕಾರದ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತಿದೆ.

ಬೆಂಗಳೂರಿಗೆ ಸೀಮಿತ ಎಂಬ ಆರೋಪ :

ಆರ್.ಅಶೋಕ್ ಅವರ ಮೇಲೆ ಅತಿ ಹೆಚ್ಚು ಕೇಳಿಬರುತ್ತಿರುವ ಆರೋಪವೆಂದರೆ ಅವರು ಕೇವಲ ಬೆಂಗಳೂರು ಕೇಂದ್ರಿತ ನಾಯಕರಾಗಿದ್ದಾರೆ ಎಂಬುದು. ಅವರ ರಾಜಕೀಯ ಹಿನ್ನೆಲೆ ಮತ್ತು ವರ್ಚಸ್ಸುಬೆಂಗಳೂರಿನಲ್ಲಿ ಬಲವಾಗಿದ್ದರೂ, ಉತ್ತರ ಕರ್ನಾಟಕ ಅಥವಾ ಹಳೆಯ ಮೈಸೂರು ಭಾಗದ ಸಮಸ್ಯೆಗಳ ಬಗ್ಗೆ ಅವರು ಅಷ್ಟೊಂದು ಪ್ರಬಲವಾಗಿ ಧ್ವನಿ ಎತ್ತುತ್ತಿಲ್ಲ ಎಂಬ ಭಾವನೆ ರಾಜ್ಯದ ಇತರ ಭಾಗಗಳ ಮತದಾರರಲ್ಲಿ ಇದೆ.

ರಾಜ್ಯ ಮಟ್ಟದ ಸಮಸ್ಯೆಗಳಿಗಿಂತ ಹೆಚ್ಚಾಗಿ ಬೆಂಗಳೂ-ರಿನ ನಾಗರಿಕ ಸಮಸ್ಯೆಗಳು, ಬಡಾವಣೆಗಳ ಸಮಸ್ಯೆಗಳಿಗೆ ಸೀಮಿತವಾಗುವ ಮೂಲಕ ಅವರು ತಮ ವ್ಯಾಪ್ತಿಯನ್ನು ತಾವೇ ಮಿತಿಗೊಳಿಸಿಕೊಂಡಿದ್ದಾರೆ ಎಂಬ ಅಭಿಪ್ರಾಯ ಇದೆ. ಬಿಜೆಪಿಯಲ್ಲಿನ ಗುಂಪುಗಾರಿಕೆ ಮತ್ತು ನಾಯಕತ್ವಕ್ಕಾಗಿರುವ ಪೈಪೋಟಿ ಅಶೋಕ್ ಅವರ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತಿರಬಹುದು.

ಅಶೋಕ್ ಅವರು ಮೂಲತಃ ಆಕ್ರಮಣಕಾರಿ ರಾಜ-ಕಾರಣಕ್ಕಿಂತ ಹೆಚ್ಚಾಗಿ ಸಂಘಟನಾತಕವಾಗಿ ಕೆಲಸ ಮಾಡುವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಇದು ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ಬೇಕಾದ ಆಕ್ರಮಣಶೀಲತೆಯನ್ನು ಮರೆ ಮಾಚಿರಬಹುದು. ರಾಜ್ಯವ್ಯಾಪಿ ಪ್ರಭಾವ ಬೀರಲು ಅವರು ಬೆಂಗಳೂರು ಕೇಂದ್ರಿತ ರಾಜಕಾರಣದಿಂದ ಹೊರಬಂದು, ರಾಜ್ಯದ ಪ್ರಮುಖ ಸಾರ್ವಜನಿಕ ಸಮಸ್ಯೆಗಳ ವಿಷಯದಲ್ಲಿ ಹೆಚ್ಚು ಗಟ್ಟಿಯಾಗಿ ಧ್ವನಿ ಎತ್ತಬೇಕಾದ ಅವಶ್ಯಕತೆಯಿದೆ ಎಂಬ ಮಾತು ಪಕ್ಷದ ವಲಯದಲ್ಲೆ ಕೇಳಿ ಬರುತ್ತಿದೆ.

ಸುನಿಲ್ ಕುಮಾರ್ ಅವರು ಹಿಂದುಳಿದ ವರ್ಗಗಳ ಪ್ರಬಲ ನಾಯಕರಾಗಿದ್ದು, ಪಕ್ಷದ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ. ಅವರನ್ನು ಮುಂಚೂಣಿಗೆ ತರುವ ಮೂಲಕ ಹಿಂದುಳಿದ ವರ್ಗಗಳ ಮತಬ್ಯಾಂಕ್ ಅನ್ನು ಬಲಪಡಿಸುವುದು ಮತ್ತು ಆಕ್ರಮಣಕಾರಿ ರಾಜಕೀಯವನ್ನು ಮುಂದುವರಿಸುವುದು ಬಿಜೆಪಿಯ ತಂತ್ರವಾಗಿರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಸುನಿಲ್ ಕುಮಾರ್ ಅವರು ಸದನದ ಒಳಗೆ ಮತ್ತು ಹೊರಗೆ ಸರ್ಕಾರದ ವೈಫಲ್ಯಗಳನ್ನು ಬಲವಾಗಿ ಪ್ರಶ್ನಿಸುವಲ್ಲಿ ಹೆಸರುವಾಸಿ. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಮರ್ಥ್ಯವನ್ನು ಅವರು ಹಲವಾರು ಬಾರಿ ಪ್ರದರ್ಶಿಸಿದ್ದಾರೆ. ಬಿಜೆಪಿಯು ಸಾಮಾಜಿ-ಕ ನ್ಯಾಯದ ಸಮೀಕರಣವನ್ನು ಗಮನದಲ್ಲಿಟ್ಟುಕೊಂಡು, ಹಿಂದುಳಿದ ವರ್ಗಗಳ ಬಲಿಷ್ಠ ನಾಯಕನಿಗೆ ಮಣೆ ಹಾಕಲು ನಿರ್ಧರಿಸಿದರೆ, ಸುನಿಲ್ ಕುಮಾರ್ ಅವರ ಹೆಸರು ಮುಂಚೂಣಿಯಲ್ಲಿರುವುದು ಸಹಜ. ಇದು ಪಕ್ಷಕ್ಕೆ ಮತಬ್ಯಾಂಕ್ ದೃಷ್ಟಿಯಿಂದಲೂ ಲಾಭದಾಯಕವಾಗಬಹುದು.

ದಕ್ಷಿಣ ಕನ್ನಡ ಭಾಗದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಅವರ ಪಾತ್ರ ದೊಡ್ಡದಿದೆ. ಸಂಘಟನೆಯಲ್ಲಿನ ದೀರ್ಘಕಾಲದ ಅನುಭವ ಮತ್ತು ಹೈಕಮಾಂಡ್‌ನೊಂದಿಗಿನ ಉತ್ತಮ ಬಾಂಧವ್ಯ ಅವರಿಗೆ ಪ್ಲಸ್- ಪಾಯಿಂಟ್ ಆಗಬಲ್ಲದು. ಪ್ರತಿಪಕ್ಷದ ನಾಯಕನ ಆಯ್ಕೆಯು ಕೇವಲ ಒಂದು ವ್ಯಕ್ತಿಯ ಆಯ್ಕೆಯಲ್ಲ, ಅದು ಪಕ್ಷದ ಒಟ್ಟಾರೆ ತಂತ್ರಗಾರಿಕೆಯಾಗಿದೆ. ಬಿಜೆಪಿಯಲ್ಲಿನ ವಿವಿಧ ಪ್ರಬಲ ಸಮುದಾಯಗಳ ನಾಯಕರ ನಡುವೆ ಸಮತಿ ಮೂಡಿಸುವುದು ಪಕ್ಷದ ಮುಂದಿರುವ ದೊಡ್ಡ ಸವಾಲು. ಪಕ್ಷದಲ್ಲಿ ಸುನಿಲ್ ಕುಮಾರ್ ಅವರ ಹೊರತಾಗಿ ಇನ್ನೂ ಹಲವು ಹಿರಿಯ ಮತ್ತು ಪ್ರಭಾವಿ ನಾಯಕರು ಈ ಸ್ಥಾನದ ಆಕಾಂಕ್ಷಿಗಳಾಗಿರಬಹುದು.

ಅವರ ನಡುವೆ ಹೇಗೆ ಸಮನ್ವಯ ಸಾಧಿಸಲಾಗುತ್ತದೆ ಎಂಬುದು ಮುಖ್ಯ.ಅಂತಿಮವಾಗಿ, ಕೇಂದ್ರದ ನಾಯಕತ್ವವು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಅಳೆದು ತೂಗಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ. ಸುನಿಲ್ ಕುಮಾರ್ ಅವರು ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿ ಎಂಬುದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವ ವಿಷಯವೇ ಹೌದು. ಅವರು ಪ್ರತಿಪಕ್ಷದ ನಾಯಕರಾದರೆ, ಸದನದಲ್ಲಿ ಸರ್ಕಾರದ ವಿರುದ್ಧದ ಚರ್ಚೆಗಳು ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

# ಸಚಿವರ ಪಟ್ಟಿಗೆ ಹೈ ಮುದ್ರೆ

ಸಭೆ ನಡೆದಿದ್ದು, ಈ ಸಭೆಯಲ್ಲಿ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಇವರುಗಳು ಪಾಲ್ಗೊಂಡು ಸಚಿವರ ಪಟ್ಟಿಯನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಸುದೀರ್ಘ ಚರ್ಚೆ ನಡೆಸಿದರು.

ಮೊದಲ ಹಂತದಲ್ಲಿ 12 ರಿಂದ 14 ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಸಚಿವರುಗಳ ಪಟ್ಟಿಗೆ ಅಂತಿಮ ರೂಪ ನೀಡಲಾಗಿದ್ದು, ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿಯವರ ಜತೆ ಅಂತಿಮವಾಗಿ ಚರ್ಚಿಸಿ ಸಚಿವರ ಪಟ್ಟಿಯನ್ನು ಫೈನಲ್ ಮಾಡಲಾಗುತ್ತದೆ.

ಇಂದಿನ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯನವರು ಮೊದಲ ಹಂತದಲ್ಲಿ ತಮ್ಮ ಕಡೆಯಿಂದ ಯಾರನ್ನು ಸಚಿವರನ್ನಾಗಿಸಬೇಕು ಎಂಬ ಹೆಸರುಗಳನ್ನು ಪ್ರಸ್ತಾಪಿಸಿದ್ದು, ಜತೆಗೆ ಹೈಕಮಾಂಡ್ ಸಹ ಕೆಲವು ಹೆಸರುಗಳನ್ನು ಪ್ರಸ್ತಾಪಿಸಿ ಅಂತಿಮವಾಗಿ 12 ರಿಂದ 14 ಸಚಿವರ ಪಟ್ಟಿಯನ್ನು ತಯಾರಿಸಲಾಗಿದೆ.

ಇದಕ್ಕೆ ರಾಹುಲ್‌ಗಾಂಧಿಯವರ ಅನುಮೋದನೆ ಪಡೆದು ಇಂದು ಸಂಜೆ ಇಲ್ಲವೇ ನಾಳೆ ಬೆಳಿಗ್ಗೆ ಸಚಿವರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಸಂಪುಟದಲ್ಲಿದ್ದ ಬಹುತೇಕ ಹಿರಿಯ ಸಚಿವರುಗಳು ಮೊದಲ ಹಂತದಲ್ಲೇ ತಮಗೆ ಸಚಿವ ಸ್ಥಾನ ನೀಡಬೇಕು ಎಂದು ಪಟ್ಟು ಹಿಡಿದಿದ್ದು, ಯಾರನ್ನು ಕೈಬಿಡಬೇಕು, ಯಾರನ್ನು ಸಂಪುಟದಲ್ಲಿ ಉಳಿಸಿಕೊಳ್ಳಬೇಕು ಎಂಬುದು ಹೈಕಮಾಂಡ್‌ಗೆ ತಲೆನೋವಾಗಿದ್ದರೂ ಅಂತಿಮವಾಗಿ 12 ರಿಂದ 14 ಸಚಿವರಿಗಷ್ಟೇ ಅವಕಾಶ ನೀಡುವ ನಿರ್ಧಾರವನ್ನು ಹೈಕಮಾಂಡ್ ಕೈಗೊಂಡಿದೆ ಎಂದು ಹೇಳಲಾಗಿದೆ.

ಹಿರಿಯರಾದ ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ, ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಹೆಚ್. ಮುನಿಯಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಯು.ಟಿ. ಖಾದರ್, ಎಚ್.ಕೆ. ಪಾಟೀಲ್, ಎಚ್.ಸಿ. ಮಹದೇವಪ್ಪ, ಶಿವಾನಂದ ಪಾಟೀಲ್, ಬೈರತಿ ಸುರೇಶ್, ಚೆಲುವರಾಯಸ್ವಾಮಿ ಇವರುಗಳಿಗೆ ಸಚಿವ ಪಟ್ಟ ಸಿಗುವ ಸಾಧ್ಯತೆಗಳಿವೆ.

ಕಾಂಗ್ರೆಸ್‌ನಲ್ಲಿ ಅಂತಿಮ ಕ್ಷಣದವರೆಗೂ ಪಟ್ಟಿ ಬದಲಾವಣೆಯಾಗುವುದು ಸಹಜ. ಹಾಗಾಗಿ ಪ್ರಮಾಣ ವಚನ ಸ್ವೀಕರಿಸುವ ಹೊತ್ತಿಗೆ ಕೆಲವು ಹೆಸರುಗಳು ಕೈಬಿಟ್ಟು ಹೊಸ ಹೆಸರುಗಳು ಸೇರ್ಪಡೆಯಾದರೂ ಅಚ್ಚರಿಯಿಲ್ಲ.

ದೆಹಲಿಯಲ್ಲಿ ಬೀಡು ಬಿಟ್ಟ ಆಕಾಂಕ್ಷಿಗಳು

ರಾಜ್ಯ ಸಚಿವ ಸಂಪುಟದಲ್ಲಿ ಶತಾಯ ಗತಾಯ ಸ್ಥಾನ ಪಡೆಯಲು 40ಕ್ಕೂ ಹೆಚ್ಚು ಸಚಿವಾಕಾಂಕ್ಷಿ ಶಾಸಕರುಗಳು ಕಳೆದ 2 ದಿನಗಳಿಂದ ದೆಹಲಿಯಲ್ಲೇ ಮೊಕ್ಕಾಂ ಹೂಡಿದ್ದು, ಹೈಕಮಾಂಡ್ ಮಟ್ಟದಲ್ಲಿ ತಮ್ಮ ಗಾಡ್‌ಫಾದರ್‌ಗಳ ಮೂಲಕ ಸಚಿವ ಸ್ಥಾನ ಪಡೆಯಲು ಪ್ರಯತ್ನ ನಡೆಸಿದ್ದಾರೆ.

ಜೂನ್ 18ರ ನಂತರ 2ನೇ ಹಂತದ ಸಂಪುಟ

ನಾಳೆ ಮೊದಲ ಹಂತದ ಸಂಪುಟ ರಚನೆಯಾದ ಬಳಿಕ ವಿಧಾನ ಪರಿಷತ್ ಹಾಗೂ ರಾಜ್ಯಸಭೆಯ ಚುನಾವಣೆ ಮುಗಿದ ಬಳಿಕ 2ನೇ ಹಂತದ ಸಂಪುಟ ರಚನೆಯಾಗಲಿದ್ದು, ಬಹುತೇಕ ಈ ತಿಂಗಳ ಅಂತ್ಯದೊಳಗೆ ಪೂರ್ಣ ಪ್ರಮಾಣದ ಸಂಪುಟ ರಚನೆಯಾಗಲಿದೆ.

ಸಚಿವ ಸಂಪುಟ ರಚನೆಯಲ ಮಾತುಕತೆಗಳಲ್ಲಿ ಭಾಗಿಯಾಗಲು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಿನ್ನೆಯೇ ದೆಹಲಿಗೆ ತೆರಳಿದ್ದು, ನಿನ್ನೆ ಸಂಜೆ ನಡೆಯಬೇಕಿದ್ದ ಸಭೆ ರಾಹುಲ್‌ಗಾಂಧಿಯವರ ಅಲಭ್ಯತೆಯ ಕಾರಣ ನಡೆಯಲಿಲ್ಲ. ಹಾಗಾಗಿ ಇಂದು ಬೆಳಿಗ್ಗೆ ಎಐಸಿಸಿ ಅಧ್ಯಕ್ಷರ ನಿವಾಸದಲ್ಲಿ ಸಭೆ ನಡೆದಿದ್ದು, ಸಂಜೆ ಹೊತ್ತಿಗೆ ಸಚಿವರುಗಳು ಹೆಸರುಗಳ ಸ್ಪಷ್ಟ ಚಿತ್ರಣ ಸಿಗಲಿದೆ.

ದೆಹಲಿಯಲ್ಲಿರುವ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯನವರು ಇಂದು ಸಂಜೆ ಬೆಂಗಳೂ-ರಿಗೆ ವಾಪಸ್ಸಾಗಲಿದ್ದು, ಹೈಕಮಾಂಡೇ ಅಂತಿಮವಾಗಿ ಸಚಿವರುಗಳ ಪಟ್ಟಿಯನ್ನು ಪ್ರಕಟಿಸಲಿದೆ.

ಕೆಪಿಸಿಸಿ ಸಾರಥಿ ಬಗ್ಗೆಯೂ ತೀರ್ಮಾನ

ಸಚಿವರ ಪಟ್ಟಿ ಜತೆಗೆ ನೂತನ ಕೆಪಿಸಿಸಿ ಅಧ್ಯಕ್ಷರ ಆಯ್ಕೆ ಬಗ್ಗೆಯೂ ವರಿಷ್ಠರ ಸಭೆಯಲ್ಲಿ ಚರ್ಚೆ ನಡೆದಿದ್ದು, ಕೆಪಿಸಿಸಿಗೆ ನೂತನ ಸಾರಥಿ ಯಾರಾಗಲಿದ್ದಾರೆ ಎಂಬುದು ಬಹುತೇಕ ಇಂದೇ ಅಂತಿಮವಾಗಲಿದೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸತೀಶ್ ಜಾರಕಿಹೊಳಿಯವರ ನೇಮಕಕ್ಕೆ ಹೈಕಮಾಂಡ್ ಒಲವು ತೋರಿತ್ತಾದರೂ ಜಾರಕಿಹೊಳಿ ಅವರು ಸಚಿವ ಸ್ಥಾನದ ಬೇಡಿಕೆಯನ್ನಿಟ್ಟಿದ್ದಾರೆ. ಎರಡು ಹುದ್ದೆಗಳನ್ನು ನೀಡಲು ಸಾಧ್ಯವಿಲ್ಲ. ಒಂದನ್ನು ಆಯ್ಕೆ ಮಾಡಿಕೊಳ್ಳಿ ಎಂದು ವರಿಷ್ಠರು ಸತೀಶ್ ಜಾರಕಿಹೊಳಿಯವರಿಗೆ ಹೇಳಿದ್ದಾರಾದರೂ ಎರಡು ಹುದ್ದೆಗಳನ್ನು ಪಡೆಯಲೇಬೇಕೆಂದು ಸತೀಶ್ ಜಾರಕಿಹೊಳಿಯವರು ದೆಹಲಿಯಲ್ಲಿ ಲಾಬಿ ನಡೆಸಿದ್ದು, ನಿನ್ನೆ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ರವರ ಜತೆ ಪ್ರತ್ಯೇಕವಾಗಿ ಚರ್ಚೆ ನಡೆಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹಿರಿಯ ನಾಯಕ ಹರಿಪ್ರಸಾದ್ ರವರ ಹೆಸರು ಮುನ್ನಲೆಗೆ ಬಂದಿದೆ.

ಒಂದು ವೇಳೆ ಸತೀಶ್ ಜಾರಕಿಹೊಳಿಯವರು ಸಚಿವರಾದರೆ ಹರಿಪ್ರಸಾದ್ ರವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಗುವ ಸಾಧ್ಯತೆಗಳಿವೆ.

ವಿಧಾನಸಭೆಯ ಸ್ಪೀಕರ್ ಯಾರಾಗಬೇಕು ಎಂಬ ಬಗ್ಗೆಯೂ ವರಿಷ್ಠರ ಸಭೆಯಲ್ಲಿ ಚರ್ಚೆಗಳು ನಡೆದಿದ್ದು, ಹಿರಿಯರಾದ ಆರ್.ವಿ. ದೇಶಪಾಂಡೆ, ಹೆಚ್.ಕೆ. ಪಾಟೀಲ್ ಅಥವಾ ದಿನೇಶ್ ಗುಂಡೂರಾವ್ ಸಭಾಧ್ಯಕ್ಷರಾಗುವ ಸಾಧ್ಯತೆಗಳಿವೆ.

# ಅವಕಾಶ ಸಿಕ್ಕರೆ ಕೆಲಸ ಮಾಡುತ್ತೇನೆ : ಯು.ಟಿ.ಖಾದರ್

ಅದನ್ನು ನಿಭಾಯಿಸುತ್ತೇನೆ ಎಂದು ತಿಳಿಸಿದರು.

ಸಚಿವನಾದರೆ ಯಾವುದೇ ಖಾತೆ ಕೊಟ್ಟರೂ ನಿಭಾಯಿಸುತ್ತೇನೆ.

ಎಲ್ಲಾ ಖಾತೆಗಳು ಉತ್ತಮವಾಗಿವೆ. ಜನ ಸಮಾನ್ಯರಿಗೆ ಸೇವೆ ಸಲ್ಲಿಸಲು ಅವಕಾಶಗಳಿವೆ. ತಾವು ಸಚಿವರಾಗಿ ಪ್ರಮಾಣವಚನ ಸ್ವಿಕರಿಸುವುದಾದರೆ, ವಿಧಾನ ಸಭಾಧ್ಯಕ್ಷ ಸ್ಥಾನಕ್ಕೆ, ಉಪಾಧ್ಯಕ್ಷ ರುದ್ರಪ್ಪ ಲಮಾಣಿಯವರಿಗೆ ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಹೇಳಿದರು.

ವಿಧಾನಸಭೆಯಲ್ಲಿ ಆಡಳಿತಾತಕವಾಗಿ ಸಾಕಷ್ಟು ಸುಧಾರಣೆ ತಂದಿದ್ದೇವೆ. ಈವರೆಗೂ ಶಾಸಕರು ಸದನದ ಹೊರಗೆ ಪುಸ್ತಕ್ಕೆ ಹಾಜರಾತಿ ಹಾಕಿ, ವಿಧಾನಸಭೆಯ ಸಭಾಂಗಣಕ್ಕೆ ಬರುತ್ತಿದ್ದರು. ಈ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಗಿದ್ದು, ಇನ್ನೂ ಮುಂದೆ ಸದಸ್ಯರು ವಿಧಾನ ಸಭೆಯ ಸಭಾಂಗಣದ ಒಳಗೆ ತಮ ಕುರ್ಚಿಯಲ್ಲಿ ಕುಳಿತು ಮೊಬೈಲ್ ಅಥವಾ ಐ-ಪ್ಯಾಡ್ ಮೂಲಕ ಖುದ್ದು ಹಾಜರಾತಿ ಹಾಕುವ ವ್ಯವಸ್ಥೆ ಜಾರಿಗೆ ತರುತ್ತಿದ್ದೇವೆ ಎಂದರು.

ಈ ಮೊದಲು ವಿಧಾನಸಭೆಯ ಸಭಾಂಗಣದ ಒಳಗೆ ಮೊಬೈಲ್ ಬಳಕೆಗೆ ನಿರ್ಬಂಧವಿತ್ತು. ಡಿಜಿಟಲೀಕರಣದತ್ತ ಹೆಜ್ಜೆ ಹಾಕುತ್ತಿರುವ ನಾವು ಮೊಬೈಲ್ ಬಳಕೆಯನ್ನು ನಿರ್ಬಂಧಿಸುವುದು ಸರಿಯಲ್ಲ. ಹೀಗಾಗಿ ಸಭಾಂಗಣದ ಒಳಗೆ ಮೊಬೈಲ್‌ಗೆ ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದರು.

ಶಾಸಕರಿಗೆ ಪ್ರತ್ಯೇಕವಾದ ಮೊಬೈಲ್ ನೀಡಲು ಚಿಂತನೆ ನಡೆದಿದೆ. ಅದನ್ನು ಬಳಕೆ ಮಾಡಲು ತರಬೇತಿ ನೀಡಲಾಗುವುದು. ಪುಸ್ತಕದ ಮಾದರಿಯಲ್ಲಿ ಪ್ರಶ್ನೋತ್ತರ, ಬಜೆಟ್ ಸೇರಿದಂತೆ ಎಲ್ಲಾ ದಾಖಲಾತಿಗಳನ್ನು ಮೊಬೈಲ್‌ನಲ್ಲೆ ಒದಗಿಸಲಾಗುತ್ತದೆ. ಇನ್ನೂ ಮುಂದೆ ಪ್ರಶ್ನೋತ್ತರಕ್ಕೆ ಸೂಚನೆಗಳನ್ನು ಭೌತಿಕವಾಗಿ ಸ್ವೀಕರಿಸುವ ಬದಲಾಗಿ ಡಿಜಿಟಲ್ ಮಾದರಿಯಲ್ಲಿ ಇ-ಮೇಲ್ ಮೂಲಕವೂ ಕಳುಹಿಸಲು ಅವಕಾಶ ಕಲ್ಪಿಸುವುದಾಗಿ ಹೇಳಿದರು.ಭಾಷಣಗಳನ್ನು ತ್ವರಿತಗತಿಯಲ್ಲಿ ಬಯಸಿದ ಭಾಷೆಗೆ ತರ್ಜುಮೆ ಮಾಡುವ ವ್ಯವಸ್ಥೆಯನ್ನು ಅಳವಡಿಸುತ್ತಿರುವುದಾಗಿ ಹೇಳಿದರು.

# ಡಿಕೆಶಿ ಸಿಎಂ ಆಗುತ್ತಿದ್ದಂತೆ ಬಿಜೆಪಿಯಲ್ಲಿ ಬದಲಾದ ಲೆಕ್ಕಾಚಾರಗಳು

ಬಲಪಡಿಸಿಕೊಳ್ಳುವುದರ ಜೊತೆಗೆ ಅಧಿಕಾರಕ್ಕೆ ಮರಳಲು ಪ್ರಯತ್ನಿಸುತ್ತಿದೆ.

ಕಳೆದ ಹಲವಾರು ತಿಂಗಳುಗಳದ ರಾಜ್ಯ ಬಿಜೆಪಿ ಘಟಕಕ್ಕೆ ರಾಜ್ಯಾಧ್ಯಕ್ಷರನ್ನಾಗಿ ಹಾಲಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇಲ್ಲವೇ ಬೇರೊಬ್ಬರನ್ನು ನೇಮಕ ಮಾಡುತ್ತಾರೆಂಬ ಮಾತುಗಳು ಕೇಳಿಬರುತ್ತಿವೆ.

ಈ ಸಂಬಂಧ ಕಳೆದ ವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಹಾಗೂ ರಾಜ್ಯ ಉಸ್ತುವಾರಿ ರಾಧಾಕೃಷ್ಣ ಮೋಹನ್ ಅಗರ್ವಾಲ್ ಸೇರಿದಂತೆ ಪಕ್ಷದ ಪ್ರಮುಖರು ಬೆಂಗಳೂ-ರಿಗೆ ಆಗಮಿಸಿ ಮಹತ್ವದ ಸಭೆಯನ್ನು ನಡೆಸಿದ್ದರು. ಬಿಜೆಪಿ ಮುಖ್ಯಸ್ಥ ಹುದ್ದೆಗೆ ಸಂಭಾವ್ಯ ಅಭ್ಯರ್ಥಿಗಳಾಗಿ ಹಲವಾರು ನಾಯಕರ ಹೆಸರುಗಳು ಕೇಳಿಬರುತ್ತಿದ್ದು ಮುಂದಿನ ಕೆಲವು ದಿನಗಳಲ್ಲಿ ' ನಿರೀಕ್ಷೆಯಿದೆ.

ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ನಾಯಕತ್ವವು ತನ್ನ ಕರ್ನಾಟಕ ಘಟಕವನ್ನು ಪುನರ್ರಚಿಸುವತ್ತ ಗಮನಹರಿಸುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪಕ್ಷದ ಪ್ರಚಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ಮುನ್ನಡೆಸಬಲ್ಲ ಮತ್ತು ರಾಜ್ಯಾದ್ಯಂತ ಬಲವಾದ ಶ್ರೀಸಾಮಾನ್ಯ ಜಾಲವನ್ನು ನಿರ್ಮಿಸಬಲ್ಲ ಹೊಸ ರಾಜ್ಯ ಅಧ್ಯಕ್ಷರ ನೇಮಕವು ಪರಿಗಣನೆಯಲ್ಲಿರುವ ಪ್ರಮುಖ ಬದಲಾವಣೆಗಳಲ್ಲಿ ಒಂದಾಗಿದೆ.

ಬಿಜೆಪಿ ತನ್ನ ಕಾರ್ಯಕ್ಷಮತೆ ನಿರ್ಣಯಿಸುತ್ತಿರುವಾಗ ಮತ್ತು ದೇಶದ ಅತ್ಯಂತ ನಿರ್ಣಾಯಕ ಚುನಾವಣಾ ಯುದ್ಧಭೂಮಿಯಲ್ಲಿ ರಾಜಕೀಯ ಆವೇಗವನ್ನು ಮರಳಿ ಪಡೆಯಲು ಬಿಜೆಪಿ ತಂತ್ರಗಳನ್ನು ಅನ್ವೇಷಿಸುತ್ತಿದೆ. ಈ ನಿಟ್ಟಿನಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕವು ಬಿಜೆಪಿಯ ಪ್ರಮುಖ ಗು-ರಿಯಾಗಿದ್ದು, ಪಕ್ಷದ ವಿಶಾಲ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳಿಗೆ ರಾಜ್ಯದಲ್ಲಿ ಅದರ ರಾಜಕೀಯ ಅದೃಷ್ಟ ಪರೀಕ್ಷೆಗೆ ವಿಶೇಷವಾಗಿ ಮಹತ್ವದ್ದಾಗಿದೆ.

ಮತದಾರರೊಂದಿಗೆ ಮರುಸಂಪರ್ಕಿಸಲು ಮತ್ತು ಅದರ ಬೆಂಬಲ ನೆಲೆಯನ್ನು ವಿಸ್ತರಿಸಲು ಸಹಾಯ ಮಾಡುವ ಸಾಂಸ್ಥಿಕ ಮತ್ತು ಚುನಾವಣಾ ಕಾರ್ಯತಂತ್ರಗಳನ್ನು ಮೌಲ್ಯಮಾಪನ ಮಾಡಲು ಪಕ್ಷವು ಮುಂದಾಗಿದೆ ಎಂದು ಹೆಸರು ಹೇಳಲು ಇಚ್ಛಿಸದ ಪ್ರಮುಖ ನಾಯಕರೊಬ್ಬರು ತಿಳಿಸಿದ್ದಾರೆ.

ಆಡಳಿತ, ಅಭಿವೃದ್ಧಿ ಮತ್ತು ಸಾರ್ವಜನಿಕ ಕಲ್ಯಾಣ ವಿಷಯಗಳಲ್ಲಿ ಕಾಂಗ್ರೆಸ್ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡುವಲ್ಲಿ ಹೆಚ್ಚು ಆಕ್ರಮಣಕಾರಿ ವಿರೋಧ ಪಕ್ಷದ ಕಾರ್ಯತಂತ್ರದೊಂದಿಗೆ ಸಂಯೋಜಿಸಲ್ಪಟ್ಟ ಒಂದು ರಿಫ್ರೆಶ್ ರಾಜ್ಯ ಘಟಕ ಅತ್ಯಗತ್ಯ ಎಂದು ಪಕ್ಷದ ಕೇಂದ್ರ ನಾಯಕತ್ವ ನಂಬಿದೆ ಎಂದು ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ತನ್ನ ಹೊಸ ವಿಧಾನದಿಂದ ಪಾಠ ಕಲಿತಿದೆ. ಅಲ್ಲಿ ಪಕ್ಷವು ಬಲವಾದ ಪ್ರಾದೇಶಿಕ ಪ್ರತಿಸ್ಪರ್ಧಿಯನ್ನು ಎದುರಿಸುತ್ತಿದ್ದರೂ ಸಹ ಪ್ರಮುಖ ರಾಜ-ಕೀಯ ಶಕ್ತಿಯಾಗಿ ಹೊರಹೊಮಲು ಸಾಂಸ್ಥಿಕ ವಿಸ್ತರಣೆ, ಕೇಡರ್ ಕ್ರೋಢೀಕರಣ ಹಾಗೂ ಪ್ರಚಾರದಲ್ಲಿ ಹೆಚ್ಚು ಪ್ರಮುಖ ಪಾತ್ರ ವಹಿಸಿತ್ತು.

ಕರ್ನಾಟಕವು ಪಕ್ಷಕ್ಕೆ ವಿಭಿನ್ನ ರಾಜಕೀಯ ಭೂದೃಶ್ಯವನ್ನು ಪ್ರಸ್ತುತಪಡಿಸುತ್ತದೆಯಾದರೂ, ಬಿಜೆಪಿ ತನ್ನ ಚುನಾವಣಾ ಕಾರ್ಯತಂತ್ರದಲ್ಲಿ ಸ್ವಲ್ಪ ಮಟ್ಟಿಗೆ ಬೂತ್ ಮತ್ತು ಜಿಲ್ಲಾ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಬಲಪಡಿಸುವ ಗುರಿಯನ್ನು ಹೊಂದಿದ್ದು ಇದೇ ರೀತಿಯ ರಚನಾತಕ ಮತ್ತು ದೀರ್ಘಕಾಲೀನ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವ ನಿರೀಕ್ಷೆಯಿದೆ.

ಹೊಸ ನಾಯಕತ್ವವನ್ನು ಪೋಷಿಸುವುದು ಮುಖ್ಯವಾಗಿದೆ. ಕೇಂದ್ರ ಮತ್ತು ರಾಜ್ಯ ನಾಯಕರ ನಡುವಿನ ಸಮನ್ವಯವನ್ನು ಸುಧಾರಿಸುವುದು ಮತ್ತು ಪ್ರಮುಖ ಮತದಾರರ ಸಮಸ್ಯೆಗಳನ್ನು ಪರಿಹರಿಸುವತ್ತ ಪಕ್ಷವು ಗಮನಹರಿಸುವ ಸಾಧ್ಯತೆಯಿದೆ. ಮುಂಬರುವ ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ವಿಶ್ವಾಸಾರ್ಹ ಪರ್ಯಾಯವಾಗಿ ಬಿಜೆಪಿಯನ್ನು ವಿನ್ಯಾಸಗೊಳಿಸಲು ವಿಶಾಲವಾದ ಮಾರ್ಗಸೂಚಿಯ ಭಾಗವಾಗಿ ಇಂತಹ ಕ್ರಮಗಳು ರೂಪುಗೊಳ್ಳುವ ನಿರೀಕ್ಷೆಯಿದೆ.

ಕರ್ನಾಟಕದ ರಾಜಕೀಯ ಭವಿಷ್ಯಕ್ಕಾಗಿ ಹೋರಾಟವನ್ನು ನಿಯಮಿತ ರಾಜಕೀಯ ವ್ಯಾಯಾಮಕ್ಕಿಂತ ಹೆಚ್ಚಿನ ಕಾರ್ಯತಂತ್ರ ರೂಪಿಸಲಾಗುತ್ತಿದೆ. ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅತ್ಯಂತ ನಿರ್ಣಾಯಕವಾಗಿದೆ ಎಂಬುದು ಪಕ್ಷದ ಪ್ರಮುಖರ ಅಭಿಪ್ರಾಯವಾಗಿದೆ.

ರಾಜ್ಯ ಘಟಕದ ನೇತೃತ್ವ ವಹಿಸಲು ಹಿರಿಯ ನಾಯಕನ ಆಯ್ಕೆಯು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯವನ್ನು ಗೆಲ್ಲುವ ಬಗ್ಗೆ ಪಕ್ಷದ ಗಂಭೀರತೆ ಪ್ರತಿಬಿಂಬಿಸುತ್ತದೆ ಎಂದು ಸುಳಿವು ನೀಡಿದ್ದಾರೆ.

# ನನ್ನ ರಾಜಕೀಯ ಜೀವನದಲ್ಲಿ ಗಾಂಧಿ ಕುಟುಂಬ ನಿರ್ಣಾಯಕ ಪಾತ್ರ ವಹಿಸಿದೆ

ಪ್ರೇರೇಪಿಸುವವರೇ ಶ್ರೇಷ್ಠ ನಾಯಕರು. ರಾಜೀವ್ ಗಾಂಧಿ ನನ್ನ ವಿಷಯದಲ್ಲೆ ಅದನ್ನೆ ಮಾಡಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಸೋನಿಯಾ ಗಾಂಧಿಯವರು ನಾಯಕತ್ವದ ಮತ್ತೊಂದು ಮಹತ್ವದ ಪಾಠವನ್ನು ಕಲಿಸಿದರು. ನಿಜವಾದ ನಾಯಕರು ಯಶಸ್ಸಿನ ಕ್ಷಣಗಳಲ್ಲಿ ಮಾತ್ರ ಅಲ್ಲದೇ, ಅತ್ಯಂತ ಕಠಿಣ ಸಂದರ್ಭಗಳಲ್ಲಿಯೂ ಪಕ್ಕದಲ್ಲಿ ನಿಂತು ಶಕ್ತಿ, ಧೈರ್ಯ ಮತ್ತು ಅಚಲ ಬೆಂಬಲವನ್ನು ನೀಡುತ್ತಾರೆ. ತಮ ರಾಜ-ಕೀಯ ಪಯಣದ ಸವಾಲಿನ ಹಂತಗಳಲ್ಲಿ ಅವರು ನನ್ನ ಮೇಲೆ ಇಟ್ಟ ವಿಶ್ವಾಸವನ್ನು ನಾನು ಸದಾ ಕೃತಜ್ಞತೆಯಿಂದ ಸರಿಸುತ್ತೇನೆ ಎಂದಿದ್ದಾರೆ.

ರಾಹುಲ್ ಗಾಂಧಿ ಅವರು ನಿರಂತರವಾಗಿ ಮಾರ್ಗದರ್ಶನ ಮತ್ತು ಸ್ಫೂರ್ತಿಯ ಮೂಲವಾಗಿದ್ದಾರೆ. ಜನತಾಂತ್ರಿಕ ಮೌಲ್ಯಗಳ ಮೇಲಿನ ಅವರ ನಂಬಿಕೆ, ಎಲ್ಲರ ಮಾತನ್ನು ಆಲಿಸುವ ಗುಣ ಹಾಗೂ ಹೆಚ್ಚು ಸಮಾನತೆ ಮತ್ತು ಸಹಾನುಭೂತಿ ಹೊಂದಿರುವ ಭಾರತದ ಕುರಿತ ಅವರ ದೃಷ್ಟಿಕೋನ ನನ್ನಂತಹ ನಾಯಕರಿಗೆ ನಿರಂತರ ಪ್ರೇರಣೆಯಾಗಿದೆ. ತಮ ಸಾರ್ವಜನಿಕ ಜೀವನದಲ್ಲಿ ಪೂರ್ತಿ ಅವರ ಬೆಂಬಲವು ಬಲವಾದ ಆಧಾರಸ್ತಂಭವಾಗಿದೆ ಎಂದಿದ್ದಾರೆ.

ಪ್ರಿಯಾಂಕಾ ಗಾಂಧಿ ಅವರು ಸದಾ ಸರಳ, ಆತಿಯ ಮತ್ತು ಪ್ರೋತ್ಸಾಹದಾಯಕ ವ್ಯಕ್ತಿತ್ವ ಹೊಂದಿದ್ದಾರೆ. ಪ್ರತಿಯೊಬ್ಬ ಕಾರ್ಯಕರ್ತನನ್ನೂ ಗೌರವ ಮತ್ತು ಘನತೆಯಿಂದ ಕಾಣುವ ಅವರು, ರಾಜಕೀಯದ ಮೂಲ ಅರ್ಥ ಜನರೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಅವರ ಆಶೋತ್ತರಗಳನ್ನು ಅರ್ಥಮಾಡಿಕೊಳ್ಳುವುದಾಗಿದೆ ಎಂದು ನಮಗೆ ನೆನಪಿಸುತ್ತಾರೆ. ಅವರ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ನಾನು ಸದಾ ಅಮೂಲ್ಯವಾಗಿ ಪರಿಗಣಿಸುತ್ತೇನೆ ಎಂದು ಹೇಳಿದ್ದಾರೆ.

ನನ್ನ ಪಾಲಿಗೆ ಗಾಂಧಿ ಕುಟುಂಬವು ನಾಯಕತ್ವದ ವಿವಿಧ ಆಯಾಮಗಳನ್ನು ಪ್ರತಿನಿಧಿಸುತ್ತದೆ. ಸಾಮರ್ಥ್ಯವನ್ನು ಗುರುತಿಸುವುದು, ಸಂಕಷ್ಟದ ಸಂದರ್ಭಗಳಲ್ಲಿ ಜನರೊಂದಿಗೆ ನಿಲ್ಲುವುದು, ಸಹಾನುಭೂತಿಯಿಂದ ಆಲಿಸುವುದು ಮತ್ತು ದೃಢನಂಬಿಕೆ ಹಾಗೂ ಸೇವಾ ಮನೋಭಾವದ ಮೂಲಕ ಇತರರಿಗೆ ಸ್ಫೂರ್ತಿ ನೀಡಿದೆ ಎಂದು ಹೇಳಿದ್ದಾರೆ.

ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ರಾಜಕೀಯ ಜೀವನ ಆರಂಭಿಸಿ, ಇಂದು ಕರ್ನಾಟಕದ ನಾಯಕತ್ವದ ಜವಾಬ್ದಾ-ರಿಯನ್ನು ವಹಿಸುವ ಅವಕಾಶ ದೊರೆತಿರುವ ನನ್ನಂತಹ ವ್ಯಕ್ತಿಗೆ, ಅವರ ವಿಶ್ವಾಸ ಮತ್ತು ಪ್ರೋತ್ಸಾಹದ ಬಗ್ಗೆ ಅಪಾರ ಕೃತಜ್ಞತೆ ಇದೆ ಎಂದಿದ್ದಾರೆ.

ಗಾಂಧಿ ಕುಟುಂಬದ ನಾಯಕತ್ವದಲ್ಲಿ ಹಾಗೂ ಕರ್ನಾಟಕದ ಜನರ ಆಶೀರ್ವಾದದೊಂದಿಗೆ, ನಾವು ಎಲ್ಲರೂ ನಂಬಿರುವ ಮೌಲ್ಯಗಳನ್ನು ಪ್ರತಿಬಿಂಬಿಸುವ ಪ್ರಗತಿಪರ, ಸಮಗ್ರ ಮತ್ತು ಸಮೃದ್ಧ ಕರ್ನಾಟಕವನ್ನು ನಿರ್ಮಿಸಲು ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕೆಲಸ ಮಾಡುವುದಾಗಿ ಭರವಸೆ ನೀಡಿದ್ದಾರೆ.

# ಜಮೀರ್ ಅಹಮದ್ ಡಿ.ಕೆ.ಸುರೇಶ್ ಮಹತ್ವದ ಮಾತುಕತೆ

ಜೊತೆ ದೆಹಲಿಗೆ ಪ್ರಯಾಣಿಸುತ್ತಿದ್ದ ಜಮೀರ್ ಅಹಮದ್ ಖಾನ್ ಆಡಿಯೋ ವೈರಲ್ ಅಗುತ್ತಿದ್ದಂತೆ ಅರ್ಧಕ್ಕೆ ವಾಪಸ್ಸಾದರು. ಇಂತಹ ಸಂದರ್ಭದಲ್ಲಿ ತಾವು ತಮೊಂದಿಗೆ ದೆಹಲಿಗೆ ಬರುವುದು ಸೂಕ್ತ ಅಲ್ಲ ಎಂದು ಸಿದ್ದರಾಮಯ್ಯ ಸಲಹೆ ನೀಡಿದ್ದರು ಎನ್ನಲಾಗಿದೆ.

ಹೀಗಾಗಿ ಜಮೀರ್ ಪಯಣ ಮೊಟಕುಗೊಳಿಸಿ ಬೆಂಗಳೂ-ರಿನಲ್ಲೆ ಉಳಿದಿದ್ದರು. ಡಿ.ಕೆ.ಸುರೇಶ್ ಇಂದು ಬೆಳಗ್ಗೆ ಅವರ ಮನೆಗೆ ಭೇಟಿ ಮಾಡಿ ಚರ್ಚೆ ನಡೆಸುವುದಲ್ಲದೇ, ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ.

ಆಡಿಯೊ ವೈರಲ್ ಆದ ಬೆನ್ನಲ್ಲೆ ಜಮೀರ್, ಸಚಿವ ಸಂಪುಟ ಸೇರ್ಪಡೆ ಬಗ್ಗೆ ಗೊಂದಲಗಳು ಏರ್ಪಟ್ಟಿವೆ. ಸಿದ್ದರಾಮಯ್ಯ ಅವರ ಪರಮಾಪ್ತ ಬಣದಲ್ಲಿ ಗುರುತಿಸಿಕೊಂಡಿದ್ದ ಜಮೀರ್‌ಗೆ, ದಾವಣಗೆರೆ ದಕ್ಷಿಣ ಉಪಚುನಾವಣೆ ಮತ್ತು ಆಡಿಯೊ ಪ್ರಕರಣ ಸಾಕಷ್ಟು ಹಿನ್ನಡೆಯುಂಟು ಮಾಡಿದೆ.

ಉಚ್ಚಾಟನೆಗೆ ಆಗ್ರಹ: ಈ ನಡುವೆ ಜಮೀರ್ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟಿಸಬೇಕೆಂಬ ಒತ್ತಾಯ ಕೇಳಿ ಬಂದಿದೆ. ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್‌ನ ಉಪಾಧ್ಯಕ್ಷ ಕುಶಾಲ್ ಹರುವೆಗೌಡ ಅವರು ಬಿಜೆಪಿ ವಿರುದ್ಧ ಕಾಂಗ್ರೆಸ್‌ನಿರ್ಣಾಯಕ ಹೋರಾಟ ನಡೆಸುತ್ತಿದೆ. ಅಂತಹ ಸಂದರ್ಭದಲ್ಲಿ ನಮ ಪಕ್ಷದ ನಾಯಕರೇ ಬಿಜೆಪಿಯ ಅಭ್ಯರ್ಥಿಯ ಪರವಾಗಿ ಮತ ಹಾಕಿಸುವಂತೆ ಹೇಳುವುದಾದರೆ ನಮಗೆ ನೈತಿಕತೆ ಇರುವುದಿಲ್ಲ. ಜಮೀರ್ ಅವರು ಮಾತನಾಡಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿದೆ. ಈ ಬಗ್ಗೆ ಸತ್ಯಾಂಶವನ್ನು ವಿಚಾರಣೆ ನಡೆಸಿ ತಪ್ಪು ಕಂಡು ಬಂದರೆಣಟಿ-ಜಜಜಿಟಿಜಜ ಪಕ್ಷದಿಂದ ಉಚ್ಚಾಟಿಸುವಂತಹ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕೆಂದು ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಬರೆದಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.

# ರಾಜಕೀಯ ಗುರುಗಳಾದ ಡಿ.ಕೆ ಶಿವಕುಮಾರ್ ಗೆ ತಿರುಪತಿ ಪ್ರಸಾದ ಲಡ್ಡು ನೀಡಿ–ರಾಜೀವ್ ಗೌಡ

**ಸಹಾಯವಾಣಿ ಸುದ್ದಿ**

ಶಿಡ್ಲಘಟ್ಟ : ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ಮುಖ್ಯಮಂತ್ರಿ ಬದಲಾವಣೆಯ ಪ್ರಕ್ರಿಯೆಗಳ ನಡುವೆ,ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾದರು.

ತಿರುಪತಿ ಕ್ಷೇತ್ರಕ್ಕೆ ಭೇಟಿ ನೀಡಿದ್ದ ರಾಜೀವ್ ಗೌಡ ತಿರುಪತಿ ತಿಮ್ಮಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿ ಪವಿತ್ರ ಪ್ರಸಾದವನ್ನು ಬೆಂಗಳೂ–ರಿನ ಸದಾಶಿವನಗರದ ನಿವಾಸದಲ್ಲಿ ಡಿ.ಕೆ. ಶಿವಕುಮಾರ್ ಭೇಟಿಯಾಗಿ "ಡಿ.ಕೆ. ಶಿವಕುಮಾರ್ ಅವರು ಕರ್ನಾಟಕದ ಣಮುಖ್ಯಮಂತ್ರಿಯಾಗಿ



ಯಶಸ್ವಿಯಾಗಲಿ" ಎಂದು ತಿಮ್ಮಪ್ಪನಲ್ಲಿ ಭಕ್ತಿಯಿಂದ ಪ್ರಾರ್ಥಿಸಿರುವುದಾಗಿ ತಿಳಿಸಿ, ದೇವಸ್ಥಾನದ ಪವಿತ್ರ ಪ್ರಸಾದವಾದ ಲಡ್ಡುವನ್ನು ಸಮರ್ಪಿಸಿದರು.

ಈ ಭೇಟಿಯ ಕುರಿತು ಪ್ರತಿಕ್ರಿಯಿಸಿರುವ ರಾಜೀವ್ ಗೌಡ, "ನಮ್ಮನೆಚ್ಚಿನ ನಾಯಕ–ರಿಗೆ ತಿಮ್ಮಪ್ಪನ ಪವಿತ್ರ ಪ್ರಸಾದವನ್ನು ಸಮರ್ಪಿಸಿ,ಅವರ ಅಮೂಲ್ಯವಾದ ಆಶೀರ್ವಾದವನ್ನು ಪಡೆದ ಕ್ಷಣ ನನಗೆ ಧನ್ಯತೆ ತಂದಿದೆ.ಅವರ ಸಮರ್ಥ ನೇತೃತ್ವದಲ್ಲಿ ನಮ್ಮ ಕರ್ನಾಟಕ ರಾಜ್ಯವು ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಗತಿ ಮತ್ತು ಅಭಿವೃದ್ಧಿಯನ್ನು ಕಾಣಲಿದೆ ಎಂಬ ಭರವಸೆ ನಮಗಿದೆ," ಎಂದು ಆಶಯ ವ್ಯಕ್ತಪಡಿಸಿದ್ದಾರೆ

ರಾಜ್ಯದಲ್ಲಿ ಜೂನ್ 3 ರಂದು ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಲಿದ್ದು,ಅದಕ್ಕೂ ಮುನ್ನವೇ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ಮೂಡಿದೆ.ನಾಯಕರ ನಡುವಿನ ಈ ಭಕ್ತಿಪೂರ್ವಕ ಹಾಗೂ ಸ್ನೇಹಪರ ನಡವಳಿಕೆಯು ಸದ್ಯ ರಾಜ–ಕೀಯ ವಲಯದಲ್ಲಿ ಗಮನ ಸೆಳೆದಿದೆ.

# ಎಂ ಸಿ ಸುಧಾಕರ್ ಸಚಿವ ಸಂಪುಟದಲ್ಲಿ ಉನ್ನತ ಪದವಿ ನೀಡಬೇಕು ಎಂದು ಗ್ಯಾರಂಟಿ ಯೋಜನೆಗಳ ಸದಸ್ಯ ಬಳುವನಹಳ್ಳಿ ಮೂರ್ತಿ ಆಗ್ರಹ

**ಸಹಾಯವಾಣಿ ಸುದ್ದಿ**

ಶಿಡ್ಲಘಟ್ಟ: ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಹಾಗೂ ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿರುವ ಡಾ. ಎಂ ಸಿ ಸುಧಾಕರ್ ಅವರಿಗೆ ಮುಂದಿನ ಸಚಿವ ಸಂಪುಟದಲ್ಲಿ ಉನ್ನತ ಪದವಿ ನೀಡಬೇಕು ಎಂದು ಆಗ್ರಹಿಸಿ ಗ್ಯಾರಂಟಿ ಯೋಜನೆಗಳ ಸದಸ್ಯ ಬಳುವನಹಳ್ಳಿ ಮೂರ್ತಿ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಮೂರು ವರ್ಷಗಳ ಕಾಲ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಹಾಗೂ ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿ ಶಿಕ್ಷಣ ಕ್ಷೇತ್ರದಲ್ಲಿ



ಅಪಾರವಾದ ಕೊಡುಗೆಯನ್ನು ನೀಡಿ ವಿದ್ಯಾರ್ಥಿಗಳ ಪಾಲಿಗೆ ಆಪತ್ಬಾಂಧವರಾಗಿ ಕಾರ್ಯನಿರ್ವಹಿಸುವುದಲ್ಲದೆ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ಅನೇಕ ಕಾರ್ಯಕ್ರಮಗಳನ್ನು ಮಾಡಿ ಸಾರ್ವಜನಿಕರ ಪರವಾಗಿ ಅನೇಕ ಉತ್ತಮ ಕೆಲಸಗಳನ್ನು ಮಾಡಿದ್ದಾರೆ.

ಜಿಲ್ಲೆಯಲ್ಲಿ ಹೂವಿನ ಮಾರುಕಟ್ಟೆ, ಶಿಡ್ಲಘಟ್ಟ ನಗರಕ್ಕೆ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆ, ಪ್ರಥಮ ದರ್ಜೆ ಕಾಲೇಜಿನ ನೂತನ ಕಟ್ಟಡ, ಚಿಂತಾಮಣಿಯಲ್ಲಿ ಇಂಜಿನಿಯರಿಂಗ್ ಕಾಲೇಜು, ಐಸ್ ಕ್ರೀಮ್ ಕಾರ್ಖಾನೆ ಸೇರಿದಂತೆ ಜಿಲ್ಲಾದ್ಯಂತ ಅನೇಕ ಗ್ರಾಮಗಳ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಸೌಲಭ್ಯಗಳು, ನಗರೋತ್ಥಾನ, ಕಾಲೇಜುಗಳ ಅಭಿವೃದ್ಧಿ, ಮತ್ತಷ್ಟು ಅಭಿವೃದ್ಧಿ ಕಾರ್ಯಗಳು ಈ ಕ್ಷೇತ್ರದಲ್ಲಿ ನಡೆಯಬೇಕು ಎಂದರೆ ಮತ್ತೊಮ್ಮೆ ಈ ಕ್ಷೇತ್ರದ ಸಚಿವರಾಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿ ಡಾ. ಎಂ.ಸಿ ಸುಧಾಕರ್ ಅವರನ್ನ ಪುನರಾಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

# ಕಾರ್ಮಿಕ ಇಲಾಖೆ ಅಧಿಕಾರಿಗಳ ಕಾರ್ಯವೈಖರಿಗೆ ಡಿಸಿ ಅಸಮಾಧಾನ

**ಸಹಾಯವಾಣಿ ಸುದ್ದಿ**

ಕೋಲಾರ: ಜಿಲ್ಲೆಯಲ್ಲಿ ಬಾಲಕಾರ್ಮಿಕ ಹಾಗೂ ಜೀತಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮಂದಗತಿಯ ಕಾರ್ಯವೈಖರಿ ಕುರಿತು ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಆಡಳಿತ ಭವನದ ಕಚೇರಿಯಲ್ಲಿ ಸೋಮವಾರ ನಡೆದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ಹಾಗೂ ಗು–ರಿಗಳನ್ನು ನಿಗದಿಪಡಿಸಿದರು.

ಕಳೆದ ಸಾಲಿನಲ್ಲಿ 14 ಬಾಲಕಾರ್ಮಿಕರನ್ನು ಮಾತ್ರ ಪತ್ತೆಹಚ್ಚಿ ರಕ್ಷಿಸಲಾಗಿದ್ದು, ಈ ಸಂಖ್ಯೆ ಅತ್ಯಂತ ಕಳಪೆಯಾಗಿದೆ ಎಂದು ಅಧಿಕಾರಿಗಳ ವಿರುದ್ಧ ಕಿಡಿ ಕಾರಿದರು.

ಕೇವಲ 37 ಪ್ರಕರಣಗಳಲ್ಲಿ ಮಾತ್ರ ತಪಾಸಣೆ ನಡೆಸಿರುವುದು ಇಲಾಖೆಯ ನಿರ್ಲಕ್ಷ್ಯವನ್ನು ಎತ್ತಿತೋರಿಸುತ್ತದೆ, ಅಧಿಕಾರಿಗಳು ಈ ವಿಚಾರದಲ್ಲಿ ಶೂನ್ಯ ಸಹಿಷ್ಣತೆ (ಚಜಡಿಂ ಣಂಟಜಡಿಚಿಟಿಛಿಜ) ಹೊಂದಿರಬೇಕು ಎಂದು ತಾಕೀತು ಮಾಡಿದರು.

14 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದ್ದು, 1,60,000 ರೂ. ದಂಡ ವಸೂಲಿ ಮಾಡಲಾಗಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳು ಸಭೆಗೆ ಒದಗಿಸಿದರು.

ಕೇವಲ ದಂಡ ವಿಧಿಸುವುದಷ್ಟೆ ಅಲ್ಲದೆ, ಪ್ರತಿಯೊಂದು ತಾಲೂಕು ಮಟ್ಟದಲ್ಲಿ ಅಂಗಡಿ ಮತ್ತು ಉದ್ದಿಮೆಗಳ ಮಾಲೀಕರ ಸಭೆ ಕರೆದು ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಜಾಗೃತಿ ಮೂಡಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು




ಜೀತಕಾರ್ಮಿಕರನ್ನು ರಕ್ಷಿಸಿದ ಬಳಿಕ ಅವ–ರಿಗೆ ಬಿಡುಗಡೆ ಪತ್ರ (ಖಜಟಜಚಿಛಿಜ ಅಜಡಿ–ಣಜಿಛಿಚಿಣಜ) ನೀಡುವಲ್ಲಿ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳ ಮಟ್ಟದಲ್ಲಿ ವಿಳಂಬವಾಗುತ್ತಿರುವುದಕ್ಕೆ ಜಿಲ್ಲಾಧಿಕಾರಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ರಕ್ಷಣೆ ಮಾಡಿದ ಕಾರ್ಮಿಕರನ್ನು ದಿನಗಟ್ಟಲೆ ಕಾಯಿಸದೆ, ತಕ್ಷಣವೇ ಅವರಿಗೆ ಬಿಡುಗಡೆ ಪತ್ರ ಒದಗಿಸುವಂತೆ ಮತ್ತು ಈ ಬಗ್ಗೆ ತಕ್ಷಣ ವರದಿ ನೀಡುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಬೈಲಾಗಳು ಹಲವು ವಷಗಳಿಂದ (2024ರಿಂದ) ನವೀಕರಣಗೊಂಡಿಲ್ಲ ಎಂಬ ಅಂಶ ಸಭೆಯಲ್ಲಿ ಬೆಳಕಿಗೆ ಬಂದಿದ್ದು, ಈ ಆಡಳಿತಾತ್ಮಕ ಲೋಪದ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ರವಿಶಂಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್. ಪಿ. ಬಾಗೇವಾಡಿ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ವರಲಕ್ಷ್ಮಿ, ಕೋಲಾರ ನಗರಸಭೆ ಆಯುಕ್ತರು ನವೀನಚಂದ್ರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸನ್ ಸೇ–ರಿದಂತೆ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಬೆಂಗಳೂರಿನಲ್ಲಿ ದುರ್ಬಲ ಮರಗಳನ್ನು ಗುರುತಿಸಲು ಹೊಸ ತಂತ್ರಜ್ಞಾನ

**ಸಹಾಯವಾಣಿ ಸುದ್ದಿ**

ಬೆಂಗಳೂರು: ಮಳೆ ಅನಾಹುತಗಳಿಂದ ಉದ್ಭವಿಸುವ ಪ್ರಾಣಹಾನಿ ಮತ್ತು ಆಸ್ತಿ ನಷ್ಟದ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಅಪಾಯದ ಮರಗಳನ್ನು ವೈಜ್ಞಾನಿಕವಾಗಿ ಗುರುತಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹೊಸ ತಂತ್ರಜ್ಞಾನದ ಮೊರೆ ಹೋಗಿದೆ. ನಗರದಲ್ಲಿ ಅನೇಕ ಮರಗಳು ಹಳೆಯದಾಗಿದ್ದು, ಅವುಗಳ ಒಳಭಾಗ ಕೊಳೆತಿದೆಯೇ, ಬೇರುಗಳು ದುರ್ಬಲವಾಗಿದೆಯೇ ಅಥವಾ ಇನ್ನೆಷ್ಟು ವರ್ಷ ಸುರಕ್ಷಿತವಾಗಿ ನಿಲ್ಲಬಲ್ಲವು ಎಂಬುದನ್ನು ಪತ್ತೆಹಚ್ಚುವುದು ಅರಣ್ಯ ಇಲಾಖೆಗೆ ಸವಾಲಾಗಿತ್ತು. ಇದಕ್ಕೆ ಪರಿಹಾರವಾಗಿ ಬೆಂಗಳೂರಿನ ವುಡ್ ಸೈನ್ ಇನ್‌ಟಿಟ್ಯೂಟ್ ಜಿಬಿಎಗೆ ವಿಶೇಷ ಪ್ರಸ್ತಾವನೆ ಸಲ್ಲಿಸಿದೆ.

ಮಾನವನ ದೇಹವನ್ನು ಸ್ಕ್ಯಾನ್ ಮಾಡುವ ರೀತಿಯಲ್ಲೇ ಮರಗಳ ಒಳ ರಚನೆಯನ್ನು ಪರೀಕ್ಷಿಸುವ ತಂತ್ರಜ್ಞಾನವನ್ನು ಬಳಸಲು ಸಂಸ್ಥೆ ಮುಂದಾಗಿದೆ. ನಾನ್–ಇನ್ವೆಸಿವ್ ಡಯಾಗ್ನೊಸ್ಟಿಕ್ ತಂತ್ರಜ್ಞಾನ, ರೆಸಿಸ್ಟೊಗ್ರಾಫ್, ಸೋನಿಕ್ ಟೊಮೊಗ್ರಫಿ, ಎಲೆಕ್ಟ್ರಿಕಲ್ ರೆಸಿಸ್ಟೆನ್ಸ್ ಟೊಮೊಗ್ರಫಿ ಹಾಗೂ



ಟ್ರಿ–ಮೋಷನ್ ವಿಶ್ಲೇಷಣೆಯಂತಹ ಸುಧಾರಿತ ಸಾಧನಗಳ ಮೂಲಕ ಮರಗಳ ಆರೋಗ್ಯ, ಬೇರುಗಳ ಸ್ಥಿತಿ ಹಾಗೂ ಉಳಿದಿರುವ ಆಯುಷ್ಯವನ್ನು ಅಂದಾಜಿಸಲಾಗುತ್ತದೆ.

ಈ ತಂತ್ರಜ್ಞಾನದಿಂದ ವಾರ್ಡ್‌ವಾರು ಮರಗಳ ಅಪಾಯದ ನೋಂದಣಿ, ಜಾತಿ ಆಧಾರಿತ ವೈಫಲ್ಯ ಅಪಾಯದ ವಿಶ್ಲೇಷಣೆ ಹಾಗೂ ಮರಗಳ ನಿರ್ವಹಣೆಗೆ ಅಗತ್ಯವಾದ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು ರೂಪಿಸಲು ಸಾಧ್ಯವಾಗಲಿದೆ.

ಪ್ರಾಯೋಗಿಕ ಹಂತವಾಗಿ ಐದು ನಗರಪಾಲಿಕೆ ವ್ಯಾಪ್ತಿಗಳಲ್ಲಿ ಯೋಜನೆ ಜಾರಿಗೊಳಿಸಲು ಐಡಬ್ಲ್ಯೂಎಸ್ಟಿ ಮುಂದಾಗಿದೆ. ಈಗಾಗಲೇ ಬೆಂಗಳೂರು ಪಶ್ಚಿಮ ನಗರಪಾಲಿಕೆ ವ್ಯಾಪ್ತಿಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ನಡೆಸಿದ ಅಧ್ಯಯನದಲ್ಲಿ ಸುಮಾರು ಶೇ.50ರಷ್ಟು ಮರಗಳು ಭವಿಷ್ಯದಲ್ಲಿ ಬೀಳುವ ಅಪಾಯದಲ್ಲಿವೆ ಎಂಬುದು ಬೆಳಕಿಗೆ ಬಂದಿದೆ.

ಮೊದಲ ಹಂತದಲ್ಲಿ ಪ್ರತಿ ನಗರಪಾಲಿಕೆಯಲ್ಲಿ ಸುಮಾರು 300 ಮರಗಳಂತೆ ಒಟ್ಟು 1,500 ಮರಗಳನ್ನು ಪರೀಕ್ಷಿಸಲು ಸುಮಾರು 4.40 ಕೋಟಿ ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ. ಯೋಜನೆಗೆ ಅನುಮೋದನೆ ದೊರೆತರೆ ಐದು ನಗರಪಾಲಿಕೆಗಳಲ್ಲೂ ಜಾ–ರಿಗೆ ತರಲಾಗುವುದು ಎಂದು ಗ್ರೇಟರ್ ಬೆಂಗಳೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುದರ್ಶನ್ ತಿಳಿಸಿದ್ದಾರೆ.

ಐಡಬ್ಲ್ಯೂಎಸ್ಟಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಬೆಂಗಳೂರು ಮರ ತಜ್ಞರ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗುವುದು. ಇದರಿಂದ ಅಪಾಯದ ಸ್ಥಿತಿಯಲ್ಲಿರುವ ಮರಗಳ ದೊಡ್ಡ ಗುಂಪನ್ನು ಗುರುತಿಸಲು ಸಾಧ್ಯವಾಗಲಿದೆ ಎಂದು ಅಧಿಕಾ–ರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ಯೋಜನೆಯಡಿ ಬೆಂಗಳೂರು ಕೇಂದ್ರ ನಗರಪಾಲಿಕೆಗೆ 69.41 ಲಕ್ಷ, ಬೆಂಗಳೂರು ಪೂರ್ವ ನಗರಪಾಲಿಕೆಗೆ 96 ಲಕ್ಷ, ಬೆಂಗಳೂರು ಉತ್ತರ ನಗರಪಾಲಿಕೆಗೆ 104.49 ಲಕ್ಷ, ಬೆಂಗಳೂರು ದಕ್ಷಿಣ ನಗರಪಾಲಿಕೆಗೆ 90.65 ಲಕ್ಷ ಹಾಗೂ ಬೆಂಗಳೂರು ಪಶ್ಚಿಮ ನಗರಪಾಲಿಕೆಗೆ 79.15 ಲಕ್ಷ ವೆಚ್ಚದ ಅಂದಾಜು ಮಾಡಲಾಗಿದೆ.

ಐಡಬ್ಲ್ಯೂಎಸ್ಟಿ ಅಧ್ಯಯನದ ಪ್ರಕಾರ, ಮರಗಳ ಒಳಭಾಗದಲ್ಲಿ ಉಂಟಾಗುವ ಕೊಳೆತ, ಶಿಲೀಂಧ್ರ ಸೋಂಕು, ಅವೈಜ್ಞಾನಿಕ ಸಮರುವಿಕೆ ಹಾಗೂ ಮರದ ಬುಡಗಳ ಸುತ್ತ ಕಾಂಕ್ರೀಟ್ ನಿರ್ಮಾಣವೇ ಮರಗಳು ಬೀಳಲು ಪ್ರಮುಖ ಕಾರಣಗಳಾಗಿವೆ. ರಸ್ತೆ ಬದಿಯ ಶೇ.90ಕ್ಕೂ ಹೆಚ್ಚು ಮರಗಳಿಗೆ ಅಗತ್ಯ ಸಂರಕ್ಷಣಾ ವಲಯವಿಲ್ಲದಿರುವುದು ಮತ್ತು ಚರಂಡಿ ಹಾಗೂ ಪಾದಚಾರಿ ಮಾರ್ಗ ಕಾಮಗಾರಿಗಳ ವೇಳೆ ಬೇರುಗಳಿಗೆ ಹಾನಿಯಾಗುತ್ತಿರುವುದೂ ಅಪಾಯವನ್ನು ಹೆಚ್ಚಿಸಿದೆ.

2024 ಹಾಗೂ 2025ರ ಪೂರ್ವ–ಮಳೆಗಾಲದ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ 431 ಮರಗಳು ಸಂಪೂರ್ಣವಾಗಿ ಉರುಳಿದ್ದು, 1,700ಕ್ಕೂ ಹೆಚ್ಚು ಕೊಂಬೆಗಳು ಮುರಿದು ಬಿದ್ದಿವೆ. ಈ ಪೈಕಿ ಗುಲ್ಮೊಹರ್, ಪೆಲ್ಟೊಫೋರಮ್ ಹಾಗೂ ಸ್ಪಾಥೋಡಿಯಾ ಜಾತಿಯ ಮರಗಳ ಪ್ರಮಾಣ ಶೇ.90ಕ್ಕಿಂತ ಹೆಚ್ಚಿದೆ ಎಂದು ವರದಿ ತಿಳಿಸಿದೆ. ಯೋಜನೆ ಜಾರಿಯಾದರೆ ಅಪಾಯದ ಮರಗಳನ್ನು ಮುಂಚಿತವಾಗಿ ಗುರುತಿಸಿ ಸೂಕ್ತ ನಿರ್ವಹಣೆ ಕೈಗೊಳ್ಳುವ ಮೂಲಕ ಪ್ರಾಣಹಾನಿ ಮತ್ತು ಆಸ್ತಿ ನಷ್ಟವನ್ನು ತಡೆಯಲು ನೆರವಾಗಲಿದೆ.

# ಪ್ರಶಸ್ತಿಗಳು ಸಾಧಕರಿಗೆ ಸ್ಫೂರ್ತಿ: ಬಸವರಾಜ ದೇಶಮುಖ

**ಸಹಾಯವಾಣಿ ಸುದ್ದಿ**

ಕಲಬುರಗಿ: ಕನ್ನಡ ಕಲಿಯುವುದು ಕಲಿಸುವುದು ಇಂದು ತುರ್ತಾದ ಅಗತ್ಯವಿದೆ. ಸಿರಿಗನ್ನಡ ವೇದಿಕೆ ಆ ಕೆಲಸ ಮಾಡುತ್ತಿದೆ. ಕನ್ನಡಕ್ಕಾಗಿ ಡಾ. ದೊಡ್ಡಪ್ಪ, ಡಾ.ಶರಣಬಸವಪ್ಪ ಅಪ್ಪ ಅವರ ಕಾರ್ಯ ಅನುಕರಣೀಯ ಇಂದು ಪ್ರಶಸ್ತಿ ಪುರಸ್ಕೃತರು ತಮ್ಮ ಸಾಧನೆಗೆ ಸಂದ ಗೌರವ ಈ

ಪ್ರಶಸ್ತಿಗಳು ಸಾಧಕರಿಗೆ ಸ್ಫೂರ್ತಿಯಾಗಲಿ ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಟ್ರಸ್ಟ್ ಕಾರ್ಯದರ್ಶಿ ಬಸವರಾಜ ದೇಶಮುಖ ಬಣ್ಣಿಸಿದರು.ರಂಗಾಯಣ ಸಭಾಂಗಣದಲ್ಲಿ ಸಿರಿಗನ್ನಡ ವೇದಿಕೆ ಹಮ್ಮಿಕೊಂಡ ಬುದ್ಧ–ಬಸವ– ಅಂಬೇಡ್ಕರ್ ಉಪನ್ಯಾಸ ಮತ್ತು ತ್ರಿರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು ಬದುಕಿನಲ್ಲಿ ಸಮಾಜಕ್ಕೆ ಒಂದು ಒಳ್ಳೆಯ ಕಾರ್ಯ ಮಾಡಿದವರು ಬುದ್ಧ, ಬಸವ, ಅಂಬೇಡ್ಕರ್. ಅವರ ತತ್ವಗಳನ್ನು ಅನುಸರಿಸಬೇಕೆಂದರು.

ವಿಶೇಷ ಉಪನ್ಯಾಸ ನೀಡಿದ ಚಿಂತಕಿ ಡಾ. ಜಯದೇವಿ ಗಾಯಕವಾಡ ಅವರು ನಮ್ಮ ದೇಶದ ಮೂರು ವಸಂತ ಕಂಡವರು ಬುದ್ಧ ಬಸವ ಅಂಬೇಡ್ಕರ್ ಅವರ ತತ್ವಸಿದ್ಧಾಂತವು ನಮಗೆ ಮಾದರಿಯಾಗಬೇಕು. ಜಗತ್ತು ಯುದ್ಧ ಬಾಂಬುಗಳಿಂದ ತಲ್ಲಣಗೊಂಡಿದೆ ಇದಕ್ಕೆ ಉತ್ತರ ಬುದ್ಧ ಬಸವ ಅಂಬೇಡ್ಕರ್ ಎಂದರು.



ಅಧ್ಯಕ್ಷತೆವಹಿಸಿದ್ದ ಡಾ.ಗವಿಸಿದ್ಧಪ್ಪ ಪಾಟೀಲರು ಮಾತನಾಡಿ ವೇದಿಕೆಯ ಕಾರ್ಯ ಚಟುವಟಿ–ಕೆಗಳನ್ನು ವಿವರಿಸಿ ಕನ್ನಡ ಕಟ್ಟುವಲ್ಲಿ ದೊಡ್ಡಪ್ಪ ಅಪ್ಪ ಮತ್ತು ಶರಣಬಸವಪ್ಪ ಅಪ್ಪ ಸಾಧನೆ ಹೇಳುತ್ತ ಬುದ್ಧಬಸವ ಅಂಬೇಡ್ಕರ್ ಅವರು ಯಾವ ಕಾಲಕ್ಕೂ ಪ್ರಸ್ತುತ ಎಂದರು.

ಸಾನಿಧ್ಯ ವಹಿಸಿದ ಬೇಲೂರು ಉರಿಲಿಂಗಪೆದ್ದಿ ಮಠದ ಪೂಜ್ಯಶ್ರೀ ಡಾ.ಪಂಚಾಕ್ಷರಿ ಸ್ವಾಮೀಜಿಗಳು ಪ್ರಶಸ್ತಿ ತಗೆದುಕೊಂಡು ಮನಸ್ಸು ಕೊಡುವ ಕೈ ಸ್ವಚ್ಛವಾಗಿರಬೇಕು ಅಂದಾಗ ಪ್ರಶಸ್ತಿಗೆ ಗೌರವ. ಇಂದು ಮಹಾತ್ಮರ ತತ್ವಗಳು, ಸಂದೇಶಗಳು ಕೇವಲ ಜಾತಿಗೆ ಸಿಮಿತರಾಗಿಲ್ಲ ಅವರದ್ದು ವಿಶ್ವ ಶಾಂತಿ, ಸಮಾನತೆ, ಮಾನವೀಯತೆಗೆ ಸಂದ ಗೌರವಗಳಾಗಿವೆ ಎಂದರು. ಸಾಹಿತಿ ಶ್ರೀಮತಿ ಶಾಂತಾ ಪಸ್ತಾಪೂರ ಮಾತನಾಡಿದರು.

ಡಾ.ಪೀರಪ್ಪ ಸಜ್ಜನ, ಪ್ರಾರ್ಥನೆ ಗೀತೆ ಹಾಡಿದರು. ಪ್ರಧಾನ ಕಾರ್ಯದರ್ಶಿ ಡಾ.ಸಿದ್ಧಪ್ಪ ಹೊಸಮನಿ ಸ್ವಾಗತಿಸಿದರು.

ಡಾ.ರಾಜಕುಮಾರ ಮಾಳಗೆ ನಿರೂಪಿಸಿದರು. ಕಾರ್ಯದರ್ಶಿ ಡಾ. ಶೀಲಾದೇವಿ ಬಿರಾದಾರ ವಂದಿಸಿದರು.

ಡಾ.ಬಿ.ಕೆ.ಪಂಡಿತ, ಬಸವರಾಜ ನಂದಿಧ್ವಜ, ಡಾ. ಭೀಮಾ ಶಂಕರ ತಳವಾರ, ಡಾ.ಶಿವಪುತ್ರ ಹೊಳ್ಕರ್, ದಶರಥ ತೆಗನೂರು, ಉತ್ತಮ ದೊಡ್ಮನಿ, ಸುರೇಶ ಕೊರವಿ, ಮಲ್ಲಣ್ಣ ಸೂರ್ಯವಂಶಿ, ಶಶಿ ಚೆಂಗಟಾ, ಡಾ.ಗಾಂಧೀಜಿ ಮೊಳಕೇರಿ, ಡಾ.ಮಲ್ಲಿನಾಥ ನಿಂಬರಗಿ, ಶ್ಯಾಮ ಮಾಡ್ಯಾಳ್ಯ, ಡಾ.ಶಿವಕುಮಾರ ಸಿಂಗೆ ಮತ್ತಿತರು ಇದ್ದರು.

ಪ್ರಶಸ್ತಿ ಪುರಸ್ಕೃತರು :

ಬುದ್ಧರತ್ನ ಪ್ರಶಸ್ತಿ ಪುರಸ್ಕೃತರು:

ಡಾ. ನಾನಾಗೌಡ ಜಿ. ಪಾಟೀಲ

ಡಾ. ನಾಗನಾಥ ಬೆಂಡೆ,ಶ್ರೀಮತಿ ಆಶಾ ವಿ. ಹೆಗಡೆ

ಶ್ರೀ ಮಹಾಂತಯ್ಯ ಕೆ. ಮಠ,ಡಾ. ಸುದರ್ಶನ ಎನ್. ಮದನಕರ್,ಶ್ರೀಮತಿ ವಿಜಯಲಕ್ಷ್ಮೀ ಸಿ. ಸಿಂಗೋಡಿ

ಶ್ರೀ ಸುಭಾಶ ಮೊಗ,ಶ್ರೀ ಅನಿಲಕುಮಾರ ಮಂಡೋಲಕರ್

ಶ್ರೀ ಆನಂದ ಚವ್ಹಾಣ,ಡಾ. ಪ್ರಕಾಶ ಜಿ. ಬಳ್ಳಾರಿ

ಶ್ರೀ ಶಮೇಶ ಎಸ್.ಕೆ.,ಡಾ. ಪ್ರಕಾಶ ಸಿ. ಪೊಲೀಸಪಾಟೀಲ

ಡಾ. ಮಹೇಶ ರುದ್ರಕರ್,ಶ್ರೀಮತಿ ಮೀನಾಕ್ಷೀ ವಾಯ್. ಕೇಸರಿ,ಭೀಮಸೇನ ಎಂ. ಗಾಯಕವಾಡ

ಬಸವರತ್ನ ಪ್ರಶಸ್ತಿ ಪರಸ್ಕೃತರು:

ಶ್ರೀ ಮಲ್ಲಯ್ಯ ಶಿವಮೂರ್ತಿಯ್ಯ ಕೋಮಾ–ರಿ,ಡಾ. ದತ್ತಾತ್ರೇಯ ಸಿ.ಎಚ್.ಡಾ. ಶಿವಲೀಲಾ ಬಾಯಿ ಎಸ್. ಪಾಟೀಲ,ಶ್ರೀ ಮಲ್ಲಿನಾಥ ಶರಣಪ್ಪ ನಾಟೀಕಾರ,ಡಾ. ಭಾಗ್ಯಜ್ಯೋತಿ,ಶ್ರೀ ಅಶೋಕ ಅಲ್ಲಿಪುರ್ಕಾರ,ಶ್ರೀ ಬಸಪ್ಪ ಷಕಲಾಸಪಲ್ಲಿ,ಡಾ. ಅರುಣಾ ಸತೀಶಕುಮಾರ ತೆಂಗಳಿ,ಶ್ರೀಮತಿ ಸವಿತಾ ಶಿವರಾಯ ದೊಡ್ಡನಿ,ಡಾ. ವಿಶ್ವನಾಥ–'ರಡ್ಡಿ,ಡಾ.ಸುರೇಶ ಮಾಣಿಕರಾವ ಮೊಳೆ,ಶ್ರೀಮತಿ ಭಾರತಿ ತುಳಸಿರಾಮ ಚವ್ಹಾಣ,ಶ್ರೀಜಲೀ ಲ ಪಟೇಲ,ಶ್ರೀ ನಾಗರಾಜ ಬೈರಾಮಡಗಿ,ಶ್ರೀ ವಿರುಪಾಕ್ಷಯ್ಯ ಗಣಾಚಾರಿ,ಡಾ. ಹಣಮಂತರಾಯ ಎಂ. ಬರಗಾಲಿ

ಶ್ರೀ ಪರಶುರಾಮ ಪೀರಪ್ಪ ಕೂಚಬಾಳ

ಡಾ. ಬಿ. ಆರ್. ಅಂಬೇಡ್ಕರ್ ರತ್ನ ಪ್ರಶಸ್ತಿ ಪುರಸ್ಕೃತರು:

ಡಾ.ಸಾಕೇರಾ ತನ್ನೀರ,ಶ್ರೀ ಶಿವಯೋಗಿ ದೇವನೂರ

ಡಾ. ಮಂಜು ಮಾರುತಿ ಮಾಲೇಕರ್,ಶ್ರೀ ಬಷಿರ ಅಹ್ಮದ್

ಡಾ ಮಹೇಶಕುಮಾರ ಶಿವಶರಣಪ್ಪ ಸಂಕನೂರ,ಶ್ರೀಮತಿ ಮಮತಾ ಜಾನೆ,ಡಾ ರವಿಕುಮಾರ ಏಮಾಜಿ

ಶ್ರೀಮತಿ ಸುರೇನಾಬಾನು ಎಂ,ಶ್ರೀ ಯಮನೂರಪ್ಪ

ಶ್ರೀ ಮಾರುತಿ ಪಿ. ಅಪ್ಪಣೋರ್,ಶ್ರೀಮತಿ ಲಕ್ಷ್ಮೀ ಕೆ ಕೋರೆ

ಶ್ರೀ ಅಶೋಕ ನಾಗಪ್ಪ,ಶ್ರೀ ಶಂಕರ ಎನ್ ಚಿನಮಳ್ಳಿ

ಶ್ರೀಮತಿ ಮಂಜುಳಾ ಎಂ. ಮೇತ್ರಿ,ಶ್ರೀ ಸಂಜುಕುಮಾರ ಎಸ್ .ಜಟ್ಟೆನೋರ,ಶ್ರೀ ಮಲ್ಲಿಕಾರ್ಜುನ ದೊಡ್ಡನಿ

ಡಾ. ಶ್ರೀಕಾಂತ,ಶ್ರೀ ಬಾಬು ಎ. ದೊಡಮನಿ,ಶ್ರೀಮತಿ ಮಂಗಲಾ ಜಿ. ಕುಮಟಾಕರ್ ಅವರಿಗೆ ಪ್ರದಾನ ಮಾಡಲಾಯಿತು.

# ಅರ್ಹ ಮತದಾರರ ರಕ್ಷಣೆಗೆ ಆದ್ಯತೆ

**ಸಹಾಯವಾಣಿ ಸುದ್ದಿ**

ಬೆಂಗಳೂರು: ಮತದಾರರ ಪಟ್ಟಿಯಿಂದ ಅನರ್ಹ ಮತದಾರರ ಹೆಸರನ್ನು ಕೈಬಿಟ್ಟು, ಅರ್ಹ ಮತದಾರರು ಯಾವುದೇ ಕಾರಣ-ಕ್ಕೂ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯ ಪ್ರಮುಖ ಉದ್ದೇಶವಾಗಿದೆ ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.



ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಖಖಖ) ಹಾಗೂ ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ ವಿಜಯನಗರ, ಬಸವನಗುಡಿ ಹಾಗೂ ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ನಡೆದ ಸಭೆಯಲ್ಲೆ ಅವರು ಮಾತನಾಡಿದರು.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತಗಟ್ಟೆ ಅಧಿಕಾರಿಗಳಾದ (ಬಿಎಲ್‌ಒ) ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಮ್ಯಾಪಿಂಗ್, ಅನ್‌ಮ್ಯಾಪಿಂಗ್ ಹಾಗೂ ರಿ-ಮ್ಯಾಪಿಂಗ್ ಕಾರ್ಯಗಳನ್ನು ಗುಣಮಟ್ಟದಿಂದ ಪೂರ್ಣಗೊಳಿಸಬೇಕೆಂದು ಸೂಚಿಸಿದರು. ನೂತನ ಬಿಎಲ್‌ಒಗಳಿಗೆ ಸಮರ್ಪಕ ತರಬೇತಿ ನೀಡುವ ಜೊತೆಗೆ, ಮತಗಟ್ಟೆಗಳಲ್ಲಿ ಅಂತರ್ಜಾಲ ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಧಿಕೃತ ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ ಮತಗಟ್ಟೆ ಏಜೆಂಟ್‌ಗಳ (ಬಿಎಲ್‌ಎ) ಸಹಕಾರ ಪಡೆದು ಪ್ರಕ್ರಿಯೆಗಳನ್ನು ಪರಿಣಾಮಕಾ-ರಿಯಾಗಿ ಪೂರ್ಣಗೊಳಿಸುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಜಂಟಿ ಮುಖ್ಯ ಚುನಾವಣಾಧಿಕಾರಿ ರಾಘವೇಂದ್ರ ಮಾತನಾಡಿ, ಎಸ್‌ಐಆರ್ ಸಂಪೂರ್ಣ ತಂತ್ರಜ್ಞಾನ ಆಧಾರಿತ ಪ್ರಕ್ರಿಯೆಯಾಗಿದ್ದು, ಮುಂದಿನ ಐದು ತಿಂಗಳು ಬಿಎಲ್‌ಒಗಳ ಕಾರ್ಯಕ್ಷಮತೆ ಅತ್ಯಂತ ನಿರ್ಣಾಯಕವಾಗಿರಲಿದೆ ಎಂದರು.

ಜೂನ್ 30ರಿಂದ ಜುಲೈ 29ರವರೆಗೆ ನಡೆಯುವ ಮನೆ-ಮನೆ ಭೇಟಿ ಕಾರ್ಯಕ್ರಮದಲ್ಲಿ ಎಲ್ಲ ಅರ್ಹ ಮತದಾರರಿಗೆ ಎನ್ಯುಮರೇಶನ್ ಫಾರ್ಮ್ ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸುವ ಜವಾಬ್ದಾರಿ ಬಿಎಲ್‌ಒಗಳ ಮೇಲಿದೆ ಎಂದು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಉಳಿಯಬೇಕಾದರೆ ಎನ್ಯುಮರೇಶನ್ ಫಾರ್ಮ್ ಭರ್ತಿ ಮಾಡುವುದು ಕಡ್ಡಾಯವಾಗಿದೆ. ಅಗತ್ಯ ದಾಖಲೆಗಳಿಲ್ಲದ ಮತದಾರರಿಗೆ ನೋಟಿಸ್ ನೀಡಿ, ದಾಖಲೆ ಸಲ್ಲಿಕೆಯಾದ ಬಳಿಕವೇ ಹೆಸರು ಸೇರ್ಪಡೆಗೊಳ್ಳಲಿದೆ ಎಂದು ಅವರು ವಿವರಿಸಿದರು.

ಸಭೆಯಲ್ಲಿ ಅಪರ ಆಯುಕ್ತೆ ಕವಿತಾ ರಾಜರಾಮ್, ಸಹಾಯಕ ಆಯುಕ್ತ (ಚುನಾವಣೆ) ರಾಮದಾಸ್, ಮತದಾರರ ನೋಂದಣಾಧಿಕಾ-ರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಬಿಎಲ್‌ಒ ಸೂಪರ್ವೈಸರ್‌ಗಳು ಹಾಗೂ ಬಿಎಲ್‌ಒಗಳು ಉಪಸ್ಥಿತರಿದ್ದರು.

# ವಿಜಯಾನಂದ ಕಾಶಪ್ಪನವರ್‌ರವರಿಗೆ ಸಚಿವ ಸ್ಥಾನ ನೀಡಲು ಆಗ್ರಹ

**ಸಹಾಯವಾಣಿ ಸುದ್ದಿ**

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕ-ರಿಸುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಯುವಮುಖಂಡ ಹಾಗೂ ಪಂಚಮಸಾಲಿ ಸಮುದಾಯದ ಪ್ರಭಾವಿ ನಾಯಕ ಶಾಸಕ ವಿಜಯಾನಂದ ಎಸ್. ಕಾಶಪ್ಪನವರ್‌ಗೆ ಸಚಿವ ಸ್ಥಾನ ನೀಡಬೇಕೆಂದು ಇಳಕಲ್ ಕಾಂಗ್ರೆಸ್‌ಘಟಕ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇಳಕಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ರಜಾಕ್ ತಟಗಾರ್‌ರವರು ವಿಜಯಾನಂದ ಕಾಶಪ್ಪನವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡುವುದ-ರಿಂದ ಬಾಗಲಕೋಟೆ, ವಿಜಾಪುರ ಸೇ-ರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.

ಇತ್ತೀಚೆಗೆ ನಡೆದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಅಭ್ಯರ್ಥಿ ಗೆಲುವಿಗೆ ಸಾಕಷ್ಟು ಶ್ರಮಿಸಿದ್ದರು. ಪಕ್ಷದ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡಿ ವಿಶೇಷವಾಗಿ ಪಂಚಮಸಾಲಿ ಸಮುದಾಯದ ಮತಗಳನ್ನು ಕಾಂಗ್ರೆಸ್‌ಗೆ ಸೆಳೆಯುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು. ಈ ಬಾರಿ ವ-ರಿಷ್ಠರು ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದರು.



ಕಾಂಗ್ರೆಸ್ ಪಕ್ಷಕ್ಕೆ ಕಳೆದ 50 ವರ್ಷಗಳಿಂದ ಕಾಶಪ್ಪನವರ ಮನೆತನವು ಶ್ರಮಿಸಿದ್ದು, ಮಾಜಿ ಸಚಿವರಾದ ದಿ.ಎಸ್. ಆರ್.ಕಾಶಪ್ಪನವರ್ ಅವರ ಪತ್ನಿ ಗೌರಮ ಕಾಶಪ್ಪನವರ್ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ವಿಜಯಾನಂದ ಎಸ್ ಕಾಶಪ್ಪನವರ ಅವರು ಎರಡನೇ ಬಾರಿ ಶಾಸಕರಾಗಿ ಹಾಗೂ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪಂಚಮಸಾಲಿ ಸಮುದಾಯದ ಸಂಘಟನೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿ ಕಾಂಗ್ರೆಸ್‌ನ ರಾಜ್ಯ ಅಧ್ಯಕ್ಷರಾಗಿ ಯುವ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿ, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷವನ್ನು ಬೇರು ಮಟ್ಟದಲ್ಲಿ ಸಂಘಟಿಸಿದ ಕ್ರಿಯಾಶೀಲ ಸಂಘಟನಾತಕ ವ್ಯಕ್ತಿತ್ವ ಹೊಂದಿರುವ ಕಾಶಪ್ಪನವರನ್ನು ಸಂಪುಟಕ್ಕೆ ತೆಗೆದುಕೊಂಡರೆ 2028 ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆನೆಬಲ ಬರಲಿದೆ ಎಂದು ಹೇಳಿದರು.

ತಮಗೆ ನೀಡಿರುವ ಯಾವುದೇ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸುವ ಜವಾಬ್ದಾರಿ ಅವರಲ್ಲಿದೆ. ನಿಗಮದ ಅಧ್ಯಕ್ಷರಾಗಿ ಕಾಯಕ ಕಿರಣ, ಸಾರಥಿ, ಜೀವಜಲ, ಬಸವ ಬೆಳಗು, ವಿಭೂತಿ ನಿರ್ಮಾಣ ಘಟಕ, ಸಂಚಾರಿ ಕ್ಯಾಂಟೀನ್ ಅಂತಹ ಯೋಜನೆಗಳನ್ನು ನಾಡಿನ ಜನರಿಗೆ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದಾರೆ ಎಂದು ಅಬ್ದುಲ್ ರಜಾಕ್ ತಟಗಾರ್ ತಿಳಿಸಿದರು.

ಶೈಕ್ಷಣಿಕವಾಗಿ ಗ್ರಾಮೀಣ ಪ್ರದೇಶದಲ್ಲಿ ಮೊರಾರ್ಜಿ ವಸತಿ ಶಾಲೆ, ಅಲ್ಪಸಂಖ್ಯಾತರ ವಸತಿ ಶಾಲೆ, ಡಾಕ್ಟರ್ ಬಿ. ಆರ್. ಅಂಬೇಡ್ಕರ್ ವಸತಿ ಶಾಲೆ, ಕಸ್ತೂರಿಬಾ ಶಾಲೆ ಹಾಗೂ ಹಿಂದುಳಿದ ಎಸ್.ಸಿ ಎಸ್.ಟಿ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳನ್ನು ಸ್ಥಾಪಿಸಿ ಮೂಲಭೂತ ಸೌಕರ್ಯವನ್ನು ಒದಗಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ನೂರು ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ಬೋರ್ಡ್‌ಗಳನ್ನು ಒದಗಿಸಿದ ಶಿಕ್ಷಣ ಪ್ರೇಮಿ ಎಂದು ಹೊಗಳಿದರು.

ಕೆಪಿಸಿಸಿ ಸದಸ್ಯ ಶಾಂತಪ್ಪ ಸುರಪುರ ಮಾತನಾಡಿ, ವಿಜಯಾನಂದ ಕಾಶಪ್ಪನವರ್‌ರವರು ಆರೋಗ್ಯ ಕ್ಷೇತ್ರದಲ್ಲಿ ಹುನಗುಂದ್ ಇಳಕಲ್ ಅವಳಿ ನಗರದಲ್ಲಿ ನೂರು ಹಾಸಿಗೆ ಸಾರ್ವಜನಿಕರ ಆಸ್ಪತ್ರೆ, ಇಳಕಲ್‌ನಲ್ಲಿ 30 ಹಾಸಿಗೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಹುನುಗುಂದದಲ್ಲಿ 50 ಹಾಸಿಗೆಯ ತಾಯಿ ಮಕ್ಕಳ ಆಸ್ಪತ್ರೆಗಳನ್ನು ಸ್ಥಾಪಿಸಿ ಜನಸಾಮಾನ್ಯರ ಆರೋಗ್ಯ ಕಾಳ-ಜಿಯುಳ್ಳ ಶಾಸಕರಾಗಿದ್ದಾರೆ ಇಂತವರನ್ನು ಸಂಪುಟಕ್ಕೆ ತೆಗೆದುಕೊಳ್ಳುವುದು ಕಾಂಗ್ರೆಸ್‌ಗೆ ಶೋಭೆ ತರುತ್ತದೆ ಎಂದು ಹೇಳಿದರು.

# ನಾರಾಯಣಸ್ವಾಮಿಯವರ ಆದರ್ಶ ಪತ್ರಿಕೋದ್ಯಮ ಸುಧಾರಣೆಗೆ ಪೂರಕ

**ಸಹಾಯವಾಣಿ ಸುದ್ದಿ**

ಕೋಲಾರ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ಕ್ಷೇತ್ರ ಸುಧಾರಣೆಯಾಗಲು ಜಿ.ನಾರಾಯಣಸ್ವಾಮಿ ಅಂಥವರು ಮಾಧ್ಯಮ ಕ್ಷೇತ್ರದಲ್ಲಿ ಇರಬೇಕು. ಜಿ.ನಾರಾಯಣಸ್ವಾಮಿ ಅವರ ಆದರ್ಶ ಮಾರ್ಗದರ್ಶನಗಳನ್ನು ಪತ್ರಕರ್ತರು ತಮ್ಮ ವೃತ್ತಿಯಲ್ಲಿ ಅಳವಡಿಸಿ ಕೊಂಡು ಜನರಿಗೆ ತಲುಪುವ ರೀತಿಯಲ್ಲಿ ಆದಾಗ ವ್ಯವಸ್ಥೆಗಳಲ್ಲಿ ಸುಧಾರಣೆಯ ಬದಲಾವಣೆಗಳು ಕಾಣಲು ಸಾಧ್ಯ ಎಂದು ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅಭಿಪ್ರಾಯಪಟ್ಟರು.



ನಗರದ ಪತ್ರಕರ್ತರ ಭವನದಲ್ಲಿ ಜಿ.ನಾರಾಯಣಸ್ವಾಮಿಯವರ ಕುಟುಂಬಸ್ಥರು ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಜಿ.ನಾರಾಯಣಸ್ವಾಮಿಯವರ ಜನ್ಮ ಶತಮಾನೋತ್ಸದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಜಿ,ನಾರಾಯಣಸ್ವಾಮಿಯವರಂಥ ಸಾಧಕರ ನೆನಪುಗಳನ್ನು ಎಂದಿಗೂ ಮರೆಯ ಬಾರದು ಇಂಥ ಸಾಧಕರ ನೆನಪಿನಿಂದ ಮತ್ತೊಬ್ಬ ಸಾಧಕರು ರೂಪುಗೊಳ್ಳಲು ಸಾಧ್ಯ .ಇಂಥಹ ಸಾಧಕರ ಕಾರ್ಯಕ್ರಮಗಳು ಮತ್ತೊಬ್ಬ ಸಾಧಕರಾಗಲು ಪ್ರೇರಣೆ ಸ್ಫೂರ್ತಿದಾಯಕವಾಗಲಿದೆ. ಶತಮಾನೋತ್ಸವ ಕಾರ್ಯಕ್ರಮಗಳು ಅಥ-ರ್ಪೂರ್ಣವಾಗಿದ್ದು ಮಾಧ್ಯಮ ಕ್ಷೇತ್ರ ಸುಧಾರಣೆಯಾಗಲು ಪೂರಕವಾಗಲಿದೆ ಎಂದರು.

ಜಿ.ನಾರಾಯಣಸ್ವಾಮಿಯವರು ನೇರ ದಿಟ್ಟನುಡಿಗಳು ನಿಷ್ಠೂರವಾದ ನಡೆಯುಳ್ಳವರಾಗಿದ್ದರು ಅವರ ಆದರ್ಶಗಳು ಮಾರ್ಗದರ್ಶನಗಳು ಮಾಧ್ಯಮದವ-ರಿಗೆ ಸ್ಫೂರ್ತಿದಾಯಕವಾಗಿದೆ ಎಂದ ಅವರು ನಾರಾಯಣಸ್ವಾಮಿ ಅವರು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಭಾರತ ಸೇವಾದಳ ಅಧ್ಯಕ್ಷರಾಗಿದ್ದವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಪಟ್ಟಾಭಿರಾಮನ್, ಎಂ.ವಿ.ಕೃಷ್ಣಪ್ಪನವರ ಒಡನಾಡಿಗಳಾಗಿದ್ದರು ಅವರ ಸಲಹೆ ಮೇರೆಗೆ ಹೈನುಗಾರಿಕೆ ಅಭಿವೃದ್ಧಿಯಿಂದಾಗಿ ಅವಿಭಜಿತ ಜಿಲ್ಲೆಯ ರೈತರ ಜೀವನಾಡಿಯಾಗಿ ಬದುಕು ಕಟ್ಟಿಕೊಡಲು ಪ್ರೇರಕರಾಗಿದ್ದವರು ಎಂದರು

ರಾಜ್ಯದ ಹಿರಿಯ ಪತ್ರಕರ್ತ ಬಿ.ವಿ.ಮಲ್ಲಿಕಾರ್ಜುನಯ್ಯ ಮಾತನಾಡಿ ನಾರಾಯಣಸ್ವಾಮಿಯವರ ಮಾತಿನಲ್ಲಿ ಕಟ್ಟುಪಾಡುಗಳಿದ್ದವು ಅವರ ಬಳಿ ಮಾತನಾಡಲು ಅಪರ ಜ್ಞಾನ ಇರಬೇಕಾಗಿತ್ತು. ನಾರಾಯಣಸ್ವಾಮಿ ಅವರಲ್ಲಿ ಸ್ವಾರ್ಥತೆ ಎಂಬುವುದು ಇರಲಿಲ್ಲ ತಮ್ಮ ಮಗನ ಕೆಲಸಕ್ಕೆ ಶಿಫಾರಸ್ಸು ಮಾಡದೆ ವಾರ್ತ ಇಲಾಖೆಯಲ್ಲಿನ ಕೆಲಸಕ್ಕೆ ಅ.ನಾ.ಪ್ರಕಾಶ್ ಅವರಿಗೆ ವಯಸ್ಸಾಗುತ್ತಿದೆ ಎಂಬ ಕಾರಣ-ಕ್ಕೆ ಶಿಫಾರಸ್ಸು ಮಾಡಿ ಕೆಲಸ ಸಿಗುವಂತೆ ಮಾಡಿದಂತವರು ಹಾಗೂ ಸ್ವಾಭಿಮಾನಿಗಳು ಅಗಿದ್ದವರು. ಪತ್ರಿಕೋದ್ಯಮದಲ್ಲಿ ಕಿರಿಯರಿಗೆ ಆಶಾಕಿರಣ ಮತ್ತು ಆದರ್ಶಪ್ರಿಯರಾಗಿದ್ದ ಅವರು ಸಚಿವ ಎಂ.ವಿ.ಕೃಷ್ಣಪ್ಪನವರು ತಮ್ಮ ಹೆಸರಿಗೆ ಮಾಡಿ ಕೊಟ್ಟಿದ್ದ ಆಸ್ತಿಯನ್ನು ಸಚಿವರ ನಿಧಾನದ ನಂತರ ಆಸ್ತಿಯನ್ನು ಅವರ ಕುಟುಂಬದವ-ರಿಗೆ ಮಾಡಿ ಕೊಟ್ಟಂತ ಪ್ರಮಾಣಿಕರಾಗಿದ್ದವರು ಎಂದು ನೆನಪಿಸಿದರು.

ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಕೆ.ಎಸ್.ರಾಮಚಂದ್ರ ಅವರು ಕೋಲಾರದಲ್ಲಿ ವಾರ್ತಾಧಿಕಾರಿಯಾಗಿದ್ದ ಸಂದರ್ಭದಲ್ಲಿ ತಮಗೆ ಮಾರ್ಗಸೂಚಕರಾಗಿದ್ದರು. ವಾರ್ತ ಇಲಾಖೆ ಕಚೇರಿಗೆ ವ್ಯವಸ್ಥೆ ಕಲ್ಪಿಸಿ ಕೊಟ್ಟಿದ್ದರು. ಯುವಕರಲ್ಲಿ ಆತ್ಮವಿಶ್ವಾಸ ಮೂಡಿಸುತ್ತಿದ್ದರು. ಸ್ವಾಭಿಮಾನಿಗಳಾಗುವ ಸ್ವಾವಲಂಭನೆಯ ಶಕ್ತಿಯನ್ನು ಬೆಳೆಸುತ್ತಿದ್ದರು ವಿವೇಕನಂದರ ಸಂದೇಶಗಳನ್ನು ಪಾಲನೆ ಮಾಡುತ್ತಿದ್ದರು. ಯಾವ ರಾಜಕಾರಣಿಯಾಗಲಿ ಅಧಿಕಾ-ರಿಗಳಾಗಲಿ ಯಾವೂದೇ ಮುಲಾಜಿಲ್ಲದೆ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡೆಸುತ್ತಿದ್ದರು ಕಿಂಚತ್ತು ಹಿಂಜರಿಕೆ ಎಂಬುವುದು ಅವರಲ್ಲಿ ಎಂದೂ ಕಾಣಲಿಲ್ಲ. ಅವರ ನಡೆ ನುಡಿಗಳಲ್ಲಿ ಮುಕ್ತವಾಗಿ ಹಾಗೂ ಪಾರದರ್ಶಕವಾಗಿದ್ದವು ಎಂದು ಕೆಲವು ಸಂದರ್ಭಗಳನ್ನು ಮೆಲುಕು ಹಾಕಿದರು.

ಕಾರ್ಯಕ್ರಮದಲ್ಲಿ ರಾಜ್ಯ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ವಿ.ವೆಂಕಟೇಶ್, ವಾರ್ತ ಇಲಾಖೆಯ ನಿವೃತ್ತ ಅಧಿಕಾರಿ ಅ.ನಾ.ಪ್ರಹ್ಲಾದರಾವ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ಜಿಲ್ಲಾಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ. ಎಸ್.ಗಣೇಶ್, ರಾಜ್ಯ ಪತ್ರಕರ್ತರ ಸಂಘದ ಸದಸ್ಯ ವಿ.ಮುನಿರಾಜು, ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಚಂದ್ರಶೇಖರ್ ಹಿರಿಯ ಪತ್ರಕರ್ತ ವಿಶ್ವಕುಂದಾಪುರ, ಅ.ಕೃ.ಸೋಮಶೇಖರ್, ಅಂಚೆ ಅಶ್ವಥ್, ಕೆ.ವಿ. ಸುರೇಶ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.

# ಜ್ಞಾನ, ಸಾಮರ್ಥ್ಯ, ಪ್ರಾಮಾಣಿಕತೆಯಿಂದ ಜೀವನ ಮೌಲ್ಯ: ಡಾ. ಚಿನ್ನಪ್ಪ ಗೌಡ

**ಸಹಾಯವಾಣಿ ಸುದ್ದಿ**

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ಶನಿವಾರ ಆಳ್ವಾಸ್ ನುಡಿಸಿರಿ ವೇದಿಕೆಯಲ್ಲಿ ಆಯೋಜಿಸಲಾದ ಪದವಿ ಪ್ರದಾನ ಸಮಾರಂಭದಲ್ಲಿ ಆಳ್ವಾಸ್‌ನ ವಿವಿಧ ಶಿಕ್ಷಣ ಸಂಸ್ಥೆಗಳ 2,627 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಚಿನ್ನಪ್ಪ ಗೌಡ ಪದವೀಧರರನ್ನು ಉದ್ದೇಶಿಸಿ ಮಾತನಾಡಿ, ಶಿಕ್ಷಣದ ನಿಜವಾದ ಉದ್ದೇಶವು ಕೇವಲ ಪದವಿ ಪಡೆಯುವುದಲ್ಲ, ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಾಗಿದೆ. ಪದವಿ ಪ್ರಮಾಣಪತ್ರವು ಕೇವಲ ಒಂದು ಕಾಗದದ ತುಣುಕಾಗಿದ್ದು, ಅದಕ್ಕೆ ನಿಜವಾದ ಮೌಲ್ಯ ದೊರೆಯುವುದು ವ್ಯಕ್ತಿಯ ಜ್ಞಾನ, ಸಾಮರ್ಥ್ಯ, ಪ್ರಾಮಾಣಿಕತೆ ಹಾಗೂ ಜೀವನ ಮೌಲ್ಯಗಳಿಂದ ಮಾತ್ರ ಎಂದು ಅಭಿಪ್ರಾಯಪಟ್ಟರು. ಶಿಕ್ಷಣವು ಕೇವಲ ಶೈಕ್ಷಣಿಕ ಸಾಧನೆಗಳಿಗೆ ಸೀಮಿತವಲ್ಲ. ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ರೂಪಿಸಿಕೊಂಡ ವ್ಯಕ್ತಿತ್ವ, ಜೀವನ ಮೌಲ್ಯಗಳು ಹಾಗೂ ಸಾಮಾಜಿಕ ಬದ್ಧತೆಯೇ ಅವರ ನಿಜವಾದ ಗುರುತು. ಆಳ್ವಾಸ್ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿವೆ. ಆಳ್ವಾಸ್ ನೀಡುವ ಪ್ರತಿಯೊಂದು ಪ್ರಮಾಣಪತ್ರವೂ ಸಂಸ್ಥೆಯ ಪರಂಪರೆ, ಸಂಸ್ಕೃತಿ ಮತ್ತು ಮೌಲ್ಯಗಳು ಅದರ ವಿದ್ಯಾರ್ಥಿಗಳ ಮೂಲಕ ಸಮಾಜದ ಮುಂದೆ ಪ್ರತಿಫಲಿಸುತ್ತವೆ. ಆ ಪರಂಪರೆಯನ್ನು ಮುಂದುವರಿಸುವ ಜವಾಬ್ದಾರಿ ಪ್ರತಿಯೊಬ್ಬ ವಿದ್ಯಾರ್ಥಿ ಮೇಲಿದೆ ಎಂದರು. ವಿದ್ಯಾರ್ಥಿಗಳು ತಾವು ಆಳ್ವಾಸ್‌ನ ಉತ್ಪನ್ನಗಳು ಎಂಬ ಹೆಮ್ಮೆಯನ್ನು ಹೊಂದಿರಬೇಕು. "ನೀವು ಎಲ್ಲೇ ಹೋದರೂ ಆಳ್ವಾಸ್‌ನ ರಾಯಭಾ-ರಿಗಳಾಗಿದ್ದೀರಿ ಎಂಬುದನ್ನು ಮರೆಯಬೇಡಿ" ಎಂದು ಅವರು ಕಿವಿಮಾತು ಹೇಳಿದರು. ಸುಮಾರು 20 ಸಾವಿರ ವಿದ್ಯಾರ್ಥಿಗಳನ್ನು ಒಳಗೊಂಡಿರುವ ಆಳ್ವಾಸ್ ಆವರಣವು ಭಾರತದ ಏಕತೆಯಲ್ಲಿ ವೈವಿಧ್ಯತೆಯ ಪರಿಕಲ್ಪನೆಯನ್ನು ಜೀವಂತವಾಗಿ ಪ್ರತಿಬಿಂಬಿಸುತ್ತದೆ. ದೇಶದ ವಿವಿಧ ಭಾಗಗಳಿಂದ ಆಗಮಿಸುವ ವಿದ್ಯಾರ್ಥಿಗಳ ನಡುವೆ ಬೆಳೆಯುವ ಪರಸ್ಪರ ಅರಿವು, ಸಹಬಾಳ್ವೆ ಮತ್ತು ಸಾಂಸ್ಕೃತಿಕ ವಿನಿಮಯವು ಅವರನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುತ್ತದೆ. ಇಂತಹ ಸಮೃದ್ಧ ಶೈಕ್ಷಣಿಕ ಹಾಗೂ ಸಾಮಾಜಿಕ ವಾತಾವರಣವು ವಿದ್ಯಾರ್ಥಿಗಳನ್ನು ಸಾರ್ವಜನಿಕ ಬದುಕಿನ ಸವಾಲುಗಳನ್ನು ಎದು-ರಿಸಲು, ಸಮಾಜದ ಅಗತ್ಯಗಳಿಗೆ ಸ್ಪಂದಿಸಲು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಸಕಾರಾತ್ಮಕ ಕೊಡುಗೆ ನೀಡಲು ಸಜ್ಜುಗೊಳಿಸುತ್ತದೆ ಎಂದು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಜ್ಞಾನವೊಂದೇ ಸಾಕಾಗುವುದಿಲ್ಲ. ವ್ಯಕ್ತಿತ್ವ ನಿರ್ಮಾಣ, ಶಿಸ್ತು, ಸಾಮಾಜಿಕ ಹೊಣೆಗಾರಿಕೆ ಹಾಗೂ ನಿರಂತರ ಕಲಿಕೆಯ ಮನೋಭಾವ ಯಶಸ್ಸಿನ ಪ್ರಮುಖ ಅಂಶಗಳಾಗಿವೆ ಎಂದರು. ಈ ಸಂದರ್ಭದಲ್ಲಿ ಶೈಕ್ಷಣಿಕ ಸಾಧನೆಗಾಗಿ ಡಾ. ಕೇಕೆಸಾನಾ, ಅಂಜನಾ ಎಂ. ಹಾಗೂ ನವರೆನ್ ಸಿಂಗ್ ಅವರಿಗೆ ಪ್ರತಿಷ್ಠಿತ ಡಾ ಪಿ.ಬಿ. ಆಚಾರ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅತ್ಯುತ್ತಮ ಸಾಧನೆಗಾಗಿ ಡಾ. ಗೌತಮಿ ಬಿ. ಅವ-ರಿಗೆ ಸೀತಾರಾಂ ಜಿಂದಾಲ್ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ವಹಿಸಿದ್ದರು. ಟ್ರಸ್ಟಿ ವಿವೇಕ್ ಆಳ್ವ, ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು, ಅಧ್ಯಾಪಕರು, ಪೋಷಕರು, ಹಳೆ ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತ-ರಿದ್ದರು. ಉಪನ್ಯಾಸಕ ರಾಜೇಶ್ ಡಿಸೋಜಾ ಕಾರ್ಯಕ್ರಮ ನಿರೂಪಿಸಿ, ಡಾ. ಕುರಿಯನ್ ಸ್ವಾಗತಿಸಿದರು.

# ಸುಮಲತಾ ಅಂಬರೀಷ್ ಅವರಿಗೆ ರಾಜ್ಯಸಭೆ ಟಿಕೆಟ್ ನೀಡುತ್ತಾ ಬಿಜೆಪಿ..?

**ಸಹಾಯವಾಣಿ ಸುದ್ದಿ**

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರ ತ್ಯಾಗ ಮಾಡಿ ಬಿಜೆಪಿ ಸೇರಿದ್ದ ಸುಮಲತಾ ಅಂಬ-ರೀಷ್ ಅವರು ಪ್ರತಿಫಲದ ನಿರೀಕ್ಷೆಯಲ್ಲಿದ್ದು, ಕರ್ನಾಟಕ ರಾಜ್ಯಸಭಾ ಚುನಾವಣೆ ತೀವ್ರ ಕುತೂಹಲ ಮೂಡಿಸಿದೆ. ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗಾಗಿ ಬಿಜೆಪಿ ಕೇಂದ್ರಿಯ ಮಂಡಳಿ ಸಂಸದೀಯ ಸಭೆ ನಡೆದಿದ್ದು, ಎರಡು-ಮೂರು ದಿನಗಳಲ್ಲಿ ಪಟ್ಟಿ ಪ್ರಕಟಗೊಳ್ಳಲಿದೆ.




ಜೂನ್ 18 ರಂದು ನಡೆಯುವ ರಾಜ್ಯಸಭೆ ಚುನಾವಣೆಗೆ ಮಂಡ್ಯ ಲೋಕಸಭಾ ಕ್ಷೇತ್ರ ಬಿಟ್ಟು ಕೊಟ್ಟ ಸುಮಲತಾ ಅಂಬರೀಷ್ ಅವರಿಗೆ ಅವಕಾಶ ನೀಡಲು ಬಿಜೆಪಿ ಹೈಕಮಾಂಡ್ ಒಲವು ತೋರಿದೆ ಎಂದು ತಿಳಿದು ಬಂದಿದೆ.

ಕರ್ನಾಟಕದಿಂದ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಗೆ ಕೇವಲ ಒಂದೇ ಸ್ಥಾನ ಮಾತ್ರ ದೊರೆಯಲಿದೆ. ಒಂದು ಸ್ಥಾನಕ್ಕೆ ದೋಸ್ತಿಗಳ ಮಧ್ಯೆ ಕುಸ್ತಿ ಶುರುವಾಗಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನೆ ಮುಂದುವರೆಸಬೇಕೆಂದು ಜೆಡಿಎಸ್ ಪಟ್ಟು ಹಿಡಿದಿದೆ. ಆದರೂ ಇನ್ನೂ ಖಚಿತತೆ ಸಿಕ್ಕಿಲ್ಲ. ಇನ್ನೊಂದೆಡೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕಸರತ್ತು ನಡೆಸಿದೆ. ಮಂಡ್ಯ ಲೋಕಸಭಾ ಕ್ಷೇತ್ರ ಬಿಟ್ಟು ಕೊಟ್ಟ ಸುಮಲತಾ ಅಂಬರೀಷ್ ಅವರಿಗೆ ರಾಜ್ಯಸಭೆಯ ಅವಕಾಶ ನೀಡಲು ಬಿಜೆಪಿ ಹೈಕಮಾಂಡ್ ಒಲವು ತೋರಿದೆ. ದೇವೇಗೌಡರ ಸ್ಪರ್ಧೆ ಚರ್ಚೆ ನಡುವೆ ಸುಮಲತಾ ಅಂಬರೀಶ್ ಬಗ್ಗೆ ವರಿಷ್ಠರು ಮಾತಾಡಿದ್ದಾರೆ ಎನ್ನಲಾಗಿದೆ

ಎನ್‌ಡಿಎಯಿಂದ ಸುಮಲತಾ ಅಂಬ-ರೀಶ್ ಹೆಸರು ಷಣೆ ಆದರೂ ಆಶ್ಚರ್ಯ ಇಲ್ಲ ಎನ್ನುವಂತಿದೆ. ಕಳೆದ ಲೋಕಸಭಾ ಚುನಾವಣೆ ವೇಳೆ ಹೆಚ್.ಡಿ.ಕುಮಾರಸ್ವಾಮಿಗೆ ಸುಮಲತಾ ಕ್ಷೇತ್ರ ಬಿಟ್ಟುಕೊಟ್ಟಿದ್ದರು.

ರಾಜ್ಯ ಬಿಜೆಪಿ ಈಗಾಗಲೇ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರ ಹೆಸರನ್ನ ರಾಜ್ಯಸಭೆಗೆ ಶಿಫಾರಸು ಮಾಡಿದೆ. ಅತ್ತ ರಾಜ್ಯಸಭೆ ಸೀಟು ಪಡೆಯಲು ಸುಮಲತಾ ಅಂಬರೀಷ್ ಅವರು ಸಹ ಪ್ರಯತ್ನ ಮಾಡುತ್ತಿದ್ದು, ಇದೇ ವೇಳೆ ಸುಮಲತಾಗೆ ಅವರ ಬಗ್ಗೆ ಬಿಜೆಪಿ ಹೈಕಮಾಂಡ್ ವಿವರಣೆ ಕೇಳಿದ್ದಾರೆ ಎಂದು ತಿಳಿದು ಬಂದಿದೆ.

**ಸುಮಲತಾ ಅವರ ನಿಲುವು :**

ಸುಮಲತಾ ಅಂಬರೀಶ್ ಅವರು ಬಿಜೆಪಿ ಸೇರ್ಪಡೆಯಾದ ನಂತರವೂ ರಾಜ್ಯ ರಾಜ-ಕೀಯ ಹಾಗೂ ಕೇಂದ್ರ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ರಾಜ್ಯಸಭಾ ಸದಸ್ಯತ್ವದ ಬಗ್ಗೆ ಅವರ ಆಕಾಂಕ್ಷೆಗಳ ಬಗ್ಗೆ ನೇರವಾಗಿ ಬಹಿರಂಗಪಡಿಸದಿದ್ದರೂ, ಪಕ್ಷದ ವೇದಿಕೆಯಲ್ಲಿ ಹಾಗೂ ಹೈಕಮಾಂಡ್ ಮಟ್ಟದಲ್ಲಿ ಈ ಕುರಿತು ಚರ್ಚೆಗಳು ನಡೆಯುತ್ತಿವೆ ಎಂಬುದು ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿರುವ ಮಾತುಗಳು.

ಸುಮಲತಾ ಅವರು ಮಂಡ್ಯ ಭಾಗದಲ್ಲಿ ಹೊಂದಿರುವ ಜನಪ್ರಿಯತೆ ಮತ್ತು ಪಕ್ಷದ ಬಲವರ್ಧನೆಗೆ ಅವರ ಕೊಡುಗೆಯನ್ನು ಗಮನದಲ್ಲಿಟ್ಟುಕೊಂಡು, ಅವರನ್ನು ರಾಜ್ಯಸಭೆಗೆ ಕಳುಹಿಸುವ ಮೂಲಕ ಪಕ್ಷಕ್ಕೆ ಲಾಭ ಮಾಡಿಕೊಳ್ಳುವ ಕುರಿತು ಬಿಜೆಪಿಯಲ್ಲಿ ಆಂತರಿಕ ಚರ್ಚೆಗಳು ನಡೆಯುತ್ತಿವೆ. ಆದರೆ, ಪಕ್ಷದ ವರಿಷ್ಠರ ಅಂತಿಮ ನಿರ್ಧಾರವೇ ಇಲ್ಲಿ ನಿರ್ಣಾಯಕವಾಗಿರುತ್ತದೆ.

ಸುಮಲತಾ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾಗ್ಯೂ, ನಂತರ ಬಿಜೆಪಿಗೆ ಬೆಂಬಲ ಸೂಚಿಸಿದ್ದರು. ಅವರ ಈ ನಡೆ ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ಪಡೆದಿತ್ತು. ರಾಜ್ಯಸಭೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದು ಸಂಪೂರ್ಣವಾಗಿ ಬಿಜೆಪಿ ಹೈಕಮಾಂಡ್‌ನ ಕೈಯಲ್ಲಿದೆ. ಪಕ್ಷದಲ್ಲಿರುವ ಹಿರಿಯ ನಾಯಕರು, ನಿಷ್ಠಾವಂತ ಕಾರ್ಯಕರ್ತರು ಮತ್ತು ಪ್ರಾದೇಶಿಕ ಸಮೀಕರಣಗಳ ಆಧಾರದ ಮೇಲೆ ಪಕ್ಷವು ತನ್ನ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಪ್ರಸ್ತುತ, ಈ ವಿಷಯವು ಪಕ್ಷದ ಆಂತರಿಕ ಚರ್ಚೆಗಳ ಹಂತದಲ್ಲಿದೆ. ಅಧಿಕೃತವಾಗಿ ಯಾವುದೇ ಷಣೆ ಅಥವಾ ಅಂತಿಮ ನಿರ್ಧಾರ ಕೈಗೊಂಡಿರುವ ಬಗ್ಗೆ ಸ್ಪಷ್ಟನೆ ಲಭ್ಯವಿಲ್ಲ.

ಬಿಜೆಪಿ ಹೈಕಮಾಂಡ್‌ನ ಈ ನಡೆ, ರಾಜ್ಯಸಭೆಗೆ ಸುಮಲತಾ ಅಂಬರೀಷ್ ಅಚ್ಚರಿಯ ಆಯ್ಕೆಯಾಗುತ್ತಾರಾ ಎನ್ನುವುದೇ ಕುತೂಹಲ ಮೂಡಿಸಿದೆ. ವಿಧಾನಪರಿಷತ್‌ಗೆ ಚುನಾವಣೆ ಹಿನ್ನಲೆ ಬಿಜೆಪಿಯಿಂದ ಇಂದು ಅಭ್ಯರ್ಥಿಗಳ ಹೆಸರು ಪ್ರಕಟವಾಗಲಿದೆ. ಈಗಾಗಲೇ ಐದು ಹೆಸರನ್ನ ರಾಜ್ಯ ಬಿಜೆಪಿ ಕೇಂದ್ರಕ್ಕೆ ಕಳುಹಿಸಿದೆ. ರಘು ಕೌಟಿಲ್ಯ, ನಳೀನ್ ಕುಮಾರ್ ಕಟೀಲ್, ಲಿಂಗರಾಜ್ ಪಾಟೀಲ್, ಎನ್ ಮಹೇಶ್, ಹಾಗೂ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಹೆಸರು ಶಿಫಾರಸು ಮಾಡಲಾಗಿದೆ ಎಂದು ತಿಳಿದು ಬಂದಿದೆ.

Printed by: SUCHITHRA PRINTER's & PUBLISHER's,#378/379, MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru 560044,karnataka.
Publised by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
OWned by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Printed At :SUCHITHRA PRINTER's & PUBLISHER's,#378/379, MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru 560044,karnataka.
Editor :S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.